# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 245 Issue: 245 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 04.04.2025 04.04.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2










## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


**ಹವ್ಯಾಸಿ ರಂಗಭೂಮಿಯ ಸವಾಲುಗಳು ಮುಂಜಾಗ್ರತೆಗಳು** ಪುಟ–2

**ಮಾನವೀಯ ಸಂಬಂಧಗಳ ಅವಶ್ಯಕತೆ** ಪುಟ–2

**ಗಾಳಿ ಮಳೆಗೆ ಕಳಚಿದ ಗೋಪುರದ ಕಳಸ** ಪುಟ–4


# ಗರ್ಭಿಣಿಯರನ್ನು ಕಿಲ್ಕಾರಿ ಆಪ್‌ನಲ್ಲಿ ನೋಂದಾಯಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ | ದಡಾರ, ರುಬೆಲ್ಲಾ ಮುಕ್ತ ಜಿಲ್ಲೆಗೆ ವೈದ್ಯರು ಕಾಳಜಿ ವಹಿಸಿ.

■ **ಹಂಪಿ ಟೈಮ್ಸ್ ಹೊಸಪೇಟೆ**

ಇದೇ ವರ್ಷಾಂತ್ಯಕ್ಕೆ ದಡಾರ ಮತ್ತು ರುಬೆಲ್ಲಾ ಮುಕ್ತ ಜಿಲ್ಲೆಯನ್ನಾಗಿಸಲು ವೈದ್ಯರೊಂದಿಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ದಡಾರ ಮತ್ತು ರುಬೇಲ್ಲಾ ನಿರ್ಮೂಲನ ಕಾರ್ಯಕ್ರಮದ ಅಂತರ್ ಇಲಾಖೆಯ ಸಮನ್ವಯ ಸಮಿತಿ ಸಭೆ ಮತ್ತು ತಾಯಿ ಮತ್ತು ಶಿಶು ಮರಣಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದರು, ವರ್ಷಾಂತ್ಯದೊಳಗೆ ದಡಾರ ಮತ್ತು ರುಬೆಲ್ಲಾ ರೋಗಮುಕ್ತವನ್ನಾಗಿಸಲು ಗುರಿಯನ್ನು ನಿಗಧಿಪಡಿಸಿ ಜಿಲ್ಲೆಯಲ್ಲಿ ಶಿಸ್ತುಬದ್ಧವಾಗಿ ಕಾರ್ಯ ನಿರ್ವಹಿಸಬೇಕಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸಂಘ–ಸಂಸ್ಥೆಗಳು, ಆಶಾ ಕಾರ್ಯಕರ್ತೆಯರ ಸಹಕಾರ ಪಡೆದುಕೊಂಡು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆಯುಷ್ ಇಲಾಖೆಯಿಂದ ಗರ್ಭಿಣಿ ಮತ್ತು ಬಾಣಂತಿಯರ ತಪಾಸಣೆ, ಸುರಕ್ಷಿತ ಹೆರಿಗೆ ಹಾಗೂ ಪೌಷ್ಠಿಕಾಂಶದ ಬಗ್ಗೆ ಆಪ್ತ ಸಮಲೋಚನೆಯನ್ನು ಕೈಗೊಳ್ಳುವುದು ಮತ್ತು ಆಯುಷ್ ಕೇಂದ್ರದಲ್ಲಿ ನಿಯಮಿತವಾಗಿ ಗರ್ಭಿಣಿಯರು ತಪಾಸಣೆ ಮತ್ತು ಲಸಿಕೆಯನ್ನು ನೀಡಬೇಕು. ಕೇಂದ್ರ ಸರ್ಕಾರದಿಂದ ಗರ್ಭಿಣಿ ಮಹಿಳೆಯರಿಗೆ ಮೊಬೈಲ್ ಮೂಲಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ಈಚೆಗೆ ಕಿಲ್ಕಾರಿ ಅಭಿಯಾನವನ್ನು ಆರಂಭಿಸಲಾಗಿದೆ. ಗರ್ಭಿಣಿ ಮಹಿಳೆಯರನ್ನು ಕಿಲ್ಕಾರಿ ಆಪ್ ಮೂಲಕ ನೊಂದಾಯಿಸಿ ಪ್ರತಿ ಗರ್ಭಿಣಿಯರ ಆರೈಕೆಗೆ ನಿಗಧಿತ ವೇಳೆಗೆ ಸಲಹೆ ಸೇರಿದಂತೆ ವೈದ್ಯಕೀಯ ಚಿಕಿತ್ಸೆಗಳ ಫಾಲೋಅಪ್‌ಗಳನ್ನು ನೇರವಾಗಿ ತಿಳಿಸುವ ಕೆಲಸ ಮಾಡುತ್ತಿದೆ. ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗರ್ಭಿಣಿ ಮಹಿಳೆಯರಿಗೆ ಆಪ್‌ನಲ್ಲಿ ನೊಂದಾಯಿಸಲು ಮಾಹಿತಿ ನೀಡಬೇಕಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿಯರು ಚಿಕಿತ್ಸೆಗೆ ಬಂದಾಗ ಕಡ್ಡಾಯವಾಗಿ ಇಸಿಜಿ ಪರೀಕ್ಷೆಯನ್ನು ಮಾಡಬೇಕು ಎಂದು ಸೂಚಿಸಿದರು.



ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ ಮಾತನಾಡಿ, ದಡಾರ ಮತ್ತು ರುಬೆಲ್ಲಾವು ವೈರಾಣುವಿನಿಂದ ಬರುವ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರದಿಂದ ನ್ಯೂಮೋನಿಯಾ, ಅತಿಸಾರ ಭೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಹಾಗೇಯೇ ತುರಿಕೆ, ವಿಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳಾಗಿವೆ. ಇದು ಬಾರದಂತೆ ಎಚ್ಚರಿಕೆ ವಹಿಸಲು ಜನಜಾಗೃತಿ ಮೂಡಿಸುವ ಅಗತ್ಯವಿದೆ. ರುಬೆಲ್ಲಾ ರೋಗವು ಗರ್ಭಿಣಿಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಗ್ಲೂಕೋಮ, ಕಣ್ಣಿನ ಪೊರೆ, ಕಿವುಡುತನ, ಮೆದಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿ ಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ವಿಶೇಷ ಗಮನ ಹರಿಸಿ ವೈದ್ಯರು ಕಾಳಜಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ವೈದ್ಯರಾದ ಡಾ.ಹರಿಪ್ರಸಾದ್, ಡಾ.ಭಾಸ್ಕರ್, ಡಾ.ರಾಧಿಕಾ, ಡಾ.ಸತೀಶ್ ಚಂದ್ರ, ಡಾ.ಷಣ್ಮುಖ ನಾಯ್ಕ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ವಿಷಯ ನಿರ್ವಾಹಕ ಎಂ.ಧರ್ಮನಗೌಡ ಸೇರಿದಂತೆ ತಾಲೂಕು ಆರೋಗ್ಯ ಅಧಿಕಾರಿಗಳು, ವೈದ್ಯಾಧಿಕಾರಿಗಳು ಭಾಗವಹಿಸಿದ್ದರು.

# ಕೊಟ್ಟೂರಲ್ಲಿ ಪಂಚಾಚಾರ್ಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಅದ್ದೂರಿ



■ **ಹಂಪಿ ಟೈಮ್ಸ್ ಕೊಟ್ಟೂರು**

ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಯ ಷಷ್ಠಿ ಸಂಭ್ರಮ ಮತ್ತು ಪಂಚಾಚಾರ್ಯ ಯುಗಮಾನೋತ್ಸವದ ಕೊನೆ ದಿನ ಗುರುವಾರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವವು ಕೊಟ್ಟೂರು ಪಟ್ಟಣದಲ್ಲಿ ಹಬ್ಬದ ಸಂಭ್ರಮವನ್ನು ನಿರ್ಮಾಣ ಮಾಡಿತ್ತು.

ಪಟ್ಟಣದ ಚಿರಬಿ ರಸ್ತೆಯ ಉಜ್ಜಿನಿ ಮಠದ ಗದ್ದುಗೆಯಿಂದ ಉಜ್ಜಿನಿ ಪೀಠದ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯರು, ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಕಿರಿಯ ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ವೀರಶೈವ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿಯ ಅಡ್ಡಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ಆರಂಭವಾಯಿತು.

ಮೊದಲ ಪಲ್ಲಕ್ಕಿಯನ್ನು ವೀರಶೈವ ಧರ್ಮದ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ ಇಟ್ಟು ಉತ್ಸವ ಮಾಡಿದ್ದು ವಿಶೇಷವಾಗಿತ್ತು. ಒಟ್ಟು ಐದು ಪಲ್ಲಕ್ಕಿಗಳ ಉತ್ಸವ ನಡೆಯಿತು.

ಚಿರಬಿ ರಸ್ತೆಯಿಂದ ಆರಂಭವಾದ ಅಡ್ಡಪಲ್ಲಕ್ಕಿ ಉತ್ಸವ ಉಜ್ಜಿನಿ ಸರ್ಕಲ್‌ಗೆ ಆಗಮಿಸಿ, ಗಾಂಧಿ ಸರ್ಕಲ್ ಮೂಲಕ ಅಳೆಯ ನಾಡಕಚೇರಿಯಿಂದ ಮತ್ತೆ ಉಜ್ಜಿನಿ ಸರ್ಕಲ್ ಮಾರ್ಗವಾಗಿ ಸರ್ಕಾರಿ ಪ.ಪೂ. ಕಾಲೇಜ್ ಮೈದಾನದಲ್ಲಿ ಸಿದ್ದಪಡಿಸಿರುವ ವೇದಿಕೆಗೆ ಆಗಮಿಸಿತು. ಪೂರ್ಣಕುಂಭ ಹೊತ್ತ ಮಹಿಳೆಯರು ಅಡ್ಡಪಲ್ಲಕ್ಕಿ ಉತ್ಸವಕ್ಕೆ ವಿಶೇಷ ಕಳೆ ತಂದರು. ವೀರಗಾಸೆ, ನಂದಿಕೋಲು, ಕಂಸಾಳೆ, ಡೊಳ್ಳು, ಗೊಂಬೆ ಮುಂತಾದ ವಾಧ್ಯಗಳು ನೋಡುಗರಿಗೆ ಆಕರ್ಷಿಸುವುದರ ಜೊತೆ ಹರ್ಷವನ್ನು ತಂದಿತು.

ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೇದಾರ ಪೀಠದ ಜಗದ್ಗುರು ಭೀಮಶಂಕರ ಶಿವಾಚಾರ್ಯ ಸ್ವಾಮೀಜಿ, ಈ ಇಬ್ಬರು ಜಗದ್ಗುರುಗಳು 13 ದಿನದ ಷಷ್ಠಿ ಮತ್ತು ಪಂಚಾಚಾರ್ಯ ಯುಗಮಾನೋತ್ಸವಕ್ಕೆ ಹಾಗೂ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಆಗಮಿಸದಿರುವುದು ಅವರ ಭಕ್ತರಲ್ಲಿ ಹಲವು ರೀತಿಯ ಚರ್ಚೆಗೆ ಗ್ರಾಸವಾಗಿ, ಭಕ್ತರಲ್ಲಿ ಅಸಮಾದಾನ ಗೋಚರಿಸಿತು.

ಷಷ್ಠಿ ಸಂಭ್ರಮದ ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರೊಂದಿಗೆ ರಾಜ್ಯ ಮತ್ತು ಹೊರ ರಾಜ್ಯಗಳಿಂದ ಸುಮಾರು 50ಕ್ಕೂ ಹೆಚ್ಚು ಶಿವಾಚಾರ್ಯರರು ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡಿದ್ದರು.






# ನನ್ನ ಗುರಿ



**ವಿದ್ಯಾರ್ಥಿಗಳಿಗಾಗಿ ಲೇಖನ ಸ್ಪರ್ಧೆ**

**(ಪ್ರೌಢಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗಾಗಿ)**

**ನಿಮ್ಮ ಪ್ರತಿಭೆ ಹೊರಹಾಕಲು ನಿಮಗೊಂದು ಸುವರ್ಣಾವಕಾಶ !**

ಪ್ರಿಯ ವಿದ್ಯಾರ್ಥಿಗಳೆ,



ನಮಗೆ ಪ್ರತಿಯೊಬ್ಬರಿಗೂ ಗುರಿ ಜೊತೆ ಕನಸುಗಳಿರುತ್ತವೆ! ನೀವೂ ಭವಿಷ್ಯದಲ್ಲಿ ಏನಾದರೂ ಆಗಬೇಕೆಂದುಕೊಳ್ಳುತ್ತೀರಿ, ಅಲ್ಲವೆ? ವೈದ್ಯ, ವಿಜ್ಞಾನಿ,ಇಂಜಿನಿಯರ್, ಕ್ರೀಡಾಪಟು, ಕಲಾವಿದ, ಶಿಕ್ಷಕ, ಅಥವಾ ಇತರ ಹೊಸ ಕ್ಷೇತ್ರಗಳಲ್ಲಿ ನಿಮ್ಮ ಹೆಜ್ಜೆ ಗುರುತನ್ನು ಮೂಡಿಸಲು ನೀವು ಬಯಸಬಹುದು. ಈ ಕನಸುಗಳನ್ನು ಬರಹ ರೂಪದಲ್ಲಿ ಹಂಚಿಕೊಳ್ಳಲು ನಿಮಗೆ ಒಂದು ಅವಕಾಶ!

ಹಂಪಿ ಟೈಮ್ಸ್ ಈಗಾಗಲೇ ಸ್ಟುಡೆಂಟ್ ಕಾಲಂ ಮೂಲಕ ಮಕ್ಕಳಲ್ಲಿ ಕತೆ ಬರೆಯುವ ಕೌಶಲ್ಯ ಮೂಡಿಸುತ್ತಿದೆ. ಬೇಸಿಗೆ ರಜೆಯ ನಿಮಿತ್ತ "ನನ್ನ ಗುರಿ" ಶೀರ್ಷಿಕೆಯಡಿ ಲೇಖನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ!



200 ಪದಗಳಿಗೆ ಮೀರದಂತೆ ಲೇಖನ ಬರೆಯಿರಿ.

ನಿಮ್ಮ ಗುರಿ/ಕನಸು ಏನು? ಅದನ್ನು ಸಾಧಿಸಲು ನೀವು ಏನನ್ನು ಮಾಡಲಿದ್ದೀರಿ? ನಿಮ್ಮ ಆಯ್ಕೆಗೆ ಪ್ರೇರಣೆಯಾರು? ಮತ್ತು ನೀವು ಅಂದುಕೊಂಡ ಗುರಿ ಸಾಧಿಸಲು ನೀವು ತೆಗೆದುಕೊಳ್ಳಬಹುದಾದ ಅವಧಿಯನ್ನೂ ನಮೂದಿಸಿ ನಿಮ್ಮ ಭಾವಚಿತ್ರ, ಸಂಪರ್ಕ ನಂಬರಿನೊಂದಿಗೆ ಬರೆದು ಕಳಿಸಿರಿ.

**ಆಯ್ದ ಲೇಖನಗಳನ್ನು "ಹಂಪಿ ಟೈಮ್ಸ್" ನಲ್ಲಿ ಪ್ರಕಟಿಸಲಾಗುವುದು!**

ನಿಮ್ಮ ಲೇಖನಗಳನ್ನು ನುಡಿ/ಯುನಿಕೋಡ್‌ನಲ್ಲಿ ಟೈಪ್ ಮಾಡಿ, ಇ-ಮೇಲ್: **hampitimes@gmail.com** ಗೆ ಕಳಿಹಿಸಿ.

ನಿಮ್ಮ ಕನಸುಗಳನ್ನು ಹಂಚಿಕೊಳ್ಳಲು ತಯಾರಾಗಿದ್ದೀರಾ? ಬರೆಯಲು ಶುರುಮಾಡಿ!

94486 33038 www.hampitimes.com / epaper.hampitimes.com hampitimes@gmail.com

# ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪಿಸಲು ತೀರ್ಮಾನ

## ರಾಹುಲ್ ಗಾಂಧಿ ಜೊತೆ ಸಿಎಂ ಸಿದ್ದರಾಮಯ್ಯ ಚರ್ಚೆ, ಸಚಿವರಾದ ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ, ಎಂ.ಬಿ.ಪಾಟೀಲ್ ಭಾಗಿ



**ನವದೆಹಲಿ:** ರಾಜ್ಯದಲ್ಲಿ ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಮೆಜಾನ್, ಫ್ಲಿಪ್ ಕಾರ್ಟ್ ಸೇರಿದಂತೆ ಹತ್ತಾರು ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಅಗತ್ಯ ಕ್ರಮಗಳಿಗಾಗಿ ಮುಂದಾಗಿತ್ತು. ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರೂ ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ಅವರ ಪರವಾಗಿ ಧ್ವನಿ ಎತ್ತಿದ್ದರು.

ಇಂದು ರಾಹುಲ್ ಗಾಂಧಿ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರುಗಳಾದ ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ, ಎಂ.ಬಿ.ಪಾಟೀಲ್ ಅವರು ಪಾಲ್ಗೊಂಡು ಈ ಬಗ್ಗೆ ಸಮಗ್ರವಾಗಿ ಚರ್ಚಿಸಿದರು. ಸಭೆ ಫಲಪ್ರದವಾಗಿದ್ದು "ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ" ಸ್ಥಾಪಿಸುವ ತೀರ್ಮಾನಕ್ಕೆ ಬರಲಾಗಿದೆ.

ಸಂಬಂಧಿತ ಸಂಸ್ಥೆಗಳಿಂದ ಶೇ5 ರಷ್ಟು ಸೆಸ್ ಸಂಗ್ರಹಿಸುವುದು ಮತ್ತು ಉಳಿದ ಅಗತ್ಯ ಹಣವನ್ನು ಸರ್ಕಾರವೇ ಭರಿಸಿ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸುವುದು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

## ಸಭೆಯಲ್ಲಿ ಗಿಗ್ ಕಾರ್ಯಕರ್ತರು

ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮೂವರು ಸಚಿವರ ನೇತೃತ್ವದಲ್ಲಿ ನಡೆದ ಸಭೆಗೆ ಆಗಮಿಸಲು ಗಿಗ್ ಕಾರ್ಮಿಕರ ವಲಯದ ಪರವಾಗಿ ಮೂವರು ಕಾರ್ಯಕರ್ತರಿಗೂ ಅವಕಾಶ ಒದಗಿಸಲಾಗಿತ್ತು.



ರಾಜ್ಯದವರಾದ ರಕ್ಷಿತಾ ದೇವ್, ಹೈದ್ರಾಬಾದಿನ ಶೇಖ್ ಸಲಾಹುದ್ದೀನ್, ನಿಖಿಲ್ ದೇವ್ ಅವರು ಸಭೆಯಲ್ಲಿ ಭಾಗವಹಿಸಿದ್ದರು. ಕಾರ್ಮಿಕ ಇಲಾಖೆ ಸಿದ್ದಪಡಿಸಿದ್ದ ಎಲ್ಲಾ ಎಂಟು ಅಂಶಗಳನ್ನೂ ರಾಹುಲ್ ಗಾಂಧಿ ಅವರು ಮೆಚ್ಚಿಕೊಂಡಿದ್ದಾರೆ. ಮುಂದಿನ ಹಂತವಾಗಿ ಸಮಗ್ರ ಅಂಶಗಳನ್ನು ಒಳಗೊಂಡ ಮಸೂದೆಯನ್ನು ಸಂಪುಟದ ಮುಂದೆ ಮಂಡಿಸಲು ತೀರ್ಮಾನಿಸಲಾಗಿದೆ. ಕಾರ್ಮಿಕ ಇಲಾಖೆ ಈಗಾಗಲೇ ಕಾರ್ಮಿಕರ ಗ್ರಾಚುಟಿ, ಸಿನಿಮಾ ಕಾರ್ಮಿಕರ ಬಿಲ್ ಸೇರಿ ಮೂರು ಪ್ರಮುಖ ಮಸೂದೆಗಳನ್ನಜ ತಂದಿದ್ದು ಈಗ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಕಾಯ್ದೆ ತರಲು ಮುಂದಾಗಿರುವುದಕ್ಕೆ ರಾಜ್ಯದ ಅಸಂಘಟಿತ ಕಾರ್ಮಿಕ ವಲಯ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದು ಸರ್ಕಾರದ ಈ ಕಾಳಜಿಗೆ ಅಭಿನಂದಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಹವ್ಯಾಸಿ ರಂಗಭೂಮಿಯ ಸವಾಲುಗಳು ಮುಂಜಾಗ್ರತೆಗಳು

# ಜೀವನದ ನಾಟಕಕ್ಕೆ ಕಾಣದ ದೇವರೇ ನಿರ್ದೇಶಕ

ಉತ್ತರ ಕರ್ನಾಟಕದ ಬಹುತೇಕ ಕಡೆ ಜಾತ್ರೆ, ಹಬ್ಬ, ಉತ್ಸವಗಳಲ್ಲಿ ಮನೋರಂಜನೆಯ ಜೊತೆಗೆ ಜೀವನ ಸಂದೇಶಗಳನ್ನು ಸಾರುವ ಪ್ರಮುಖ ಕಲಾ ಪ್ರಕಾರಗಳೆಂದರೆ ನಾಟಕಗಳು. ನಾಟಕಗಳು ಜೀವಂತ ಕಲೆಗಳಾಗಿದ್ದು, ಇಂತಹ ಜೀವಂತ ಕಲೆಗಳನ್ನು ಉಳಿಸುವಲ್ಲಿ ವೃತ್ತಿರಂಗಭೂಮಿಯ ಜೊತೆಗೆ ಹವ್ಯಾಸಿ ರಂಗಭೂಮಿಯ ಪಾತ್ರವೂ ಬಹುವಾಗಿ ಇದೆ. ಸಮಕಾಲೀನ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿಯ ಎದುರಿಸುತ್ತಿರುವ ಸವಾಲುಗಳು ಮತ್ತು ಅನುಸರಿಸಬೇಕಾದ ಜಾಗೃತಿಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಲೇಖನ.....

### 1. ಸಂಪನ್ಮೂಲ ಕ್ರೋಢೀಕರಣದ ಸವಾಲು:

ರಂಗಸಜ್ಜಿಕೆ, ಮಹಿಳಾ ಪಾತ್ರಧಾರಿಗಳ ಗೌರವಧನ, ವಾದ್ಯವೃಂದ, ಛಾಯಾಗ್ರಹಣ ಮೊದಲಾದವುಳಿಗೆ ಅಗತ್ಯವಾದ ಹಣಕಾಸನ್ನು ಕ್ರೋಢೀಕರಿಸುವುದೇ ಬಹುದೊಡ್ಡ ಸವಾಲಾಗಿರುತ್ತದೆ. ಸ್ಥಿತಿವಂತ ಪಾತ್ರಧಾರಿಗಳು ತಾವೇ ಬಂಡವಾಳ ಹೂಡುತ್ತಾರೆ. ಬಡಕಲಾವಿದರ ಸಂದರ್ಭದಲ್ಲಿ ನಾಟಕದ ಜವಾಬ್ದಾರಿಯನ್ನು ಹೊತ್ತುಕೊಂಡವರು ಅವರಿವರನ್ನು ಮನವೊಲಿಸಿ,ಕಾಡಿಬೇಡಿ ಹಣ ಹೊಂದಿಸುವ ಹೊತ್ತಿಗೆ ಹೈರಾಣಾಗುತ್ತಾರೆ. ಒಮ್ಮೊಮ್ಮೆ ಹಣ ನೀಡುತ್ತೇವೆ ಎಂದವರು ಕೈಕೊಡುವ ಸಂದರ್ಭಗಳೂ ಬರಬಹುದು. ಆಗ ಜವಾಬ್ದಾರಿ ಹೊತ್ತವರು ಸಾಲಸೂಲ ಮಾಡಿ ತೀರಿಸಿದ್ದು ಇದೆ. ದುಬಾರಿ ಜಮಾನದಲ್ಲಿ ನಾಟಕದ ಆಯೋಜನೆಗೆ ಅಗತ್ಯವಾದ ಸಂಪನ್ಮೂಲ ಕ್ರೋಢೀಕರಣ ಮಾಡುವುದು ಸಮಕಾಲೀನ ಹವ್ಯಾಸಿ ರಂಗಭೂಮಿಯ ಪ್ರಮುಖ ಸವಾಲಾಗಿದೆ.

### 2. ಪಾತ್ರಧಾರಿಗಳ ಆಯ್ಕೆಯ ಸವಾಲು:

ಸಮಾನಮನಸ್ಕರ,ಪುರಪ್ರಮುಖರ ತೀರ್ಮಾನದ ಹಾಗೆ ಆಯ್ಕೆ ಮಾಡಿದ ನಾಟಕದ ಪಾತ್ರಗಳಿಗೆ ಸರಿಹೊಂದುವ ಪಾತ್ರಧಾರಿಗಳನ್ನು ಆಯ್ಕೆ ಮಾಡುವುದು ಆಯೋಜಕರಿಗೆ ದೊಡ್ಡ ಸವಾಲಾಗಿರುತ್ತದೆ. ಕೆಲವೊಮ್ಮೆ ಅನುಭವ ಮತ್ತು ಅಭಿನಯದ ಸಾಮಾನ್ಯ ತಿಳುವಳಿಕೆ ಇಲ್ಲದವರನ್ನು ಆಯ್ದುಕೊಂಡು ಅವರಿಂದ ಪಾತ್ರಗಳನ್ನು ಮಾಡಿಸುವುದು ಸವಾಲಿನ ಕೆಲಸವೇ ಆಗಿರುತ್ತದೆ. ವಿಶೇಷವಾಗಿ ಪೌರಾಣಿಕ ಪಾತ್ರಗಳ ಸಂದರ್ಭದಲ್ಲಿ ಉತ್ತಮ ಶಾರೀರ ಇರುವ,ಪಾತ್ರಕ್ಕೆ ನ್ಯಾಯ ಒದಗಿಸುವ ಪಾತ್ರಧಾರಿಗಳನ್ನು ಆಯ್ಕೆ ಮಾಡುವುದು ಸವಾಲಿನ ಕೆಲಸವಾಗಿರುತ್ತದೆ.

### 3. ತಾಲೀಮಿನ ಸವಾಲು:



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ


Scan For Digital Colourful
HAMPI TIMES E-paper

ಆಯ್ಕೆ ಮಾಡಿದ ಪಾತ್ರಧಾರಿಗಳು ನಿಯಮಿತವಾಗಿ ಅಭ್ಯಾಸಕ್ಕೆ ಬಂದರೆ ಮತ್ತು ನಿರ್ದೇಶಕರ ಮಾತುಗಳಿಗೆ ಮನ್ನಣೆ ಇತ್ತರೆ ನಾಟಕದ ಯಶಸ್ಸು ಸಾಧ್ಯ. ಆದರೆ ನಾಟಕದ ಪಾತ್ರಧಾರಿಗಳು ಕೆಲವೊಮ್ಮೆ ಸಕಾಲಕ್ಕೆ, ನಿರಂತರವಾಗಿ ಅಭ್ಯಾಸಕ್ಕೆ ಬಾರದೆ ಹೋದರೆ ಮಾತುಗಳನ್ನು ಸರಿಯಾಗಿ ಕಲಿಯಲಾಗದು. ಇದರಿಂದ ಪಾತ್ರಧಾರಿಗಳ ಮಧ್ಯೆ ಸಮನ್ವಯದ ಕೊರತೆ ಉಂಟಾಗಬಹುದು. ಹಾಗೆಯೇ ಎಲ್ಲರಿಗೂ ಅನುಕೂಲವಾಗುವ ತಾಲೀಮಿನ ಸ್ಥಳ, ಸಮಯ ಆಯ್ಕೆ ಮಾಡುವುದು ಆಯೋಜಕರಿಗೆ ಸವಾಲೇ ಆಗಿರುತ್ತದೆ.

### 4. ನಿಭಾಯಿಸುವ ಸವಾಲು:

ಹಾಗೋ ಹೀಗೋ ಸಂಪನ್ಮೂಲವನ್ನು ಕ್ರೋಢಿ ಕರಿಸಿಕೊಂಡು ಇನ್ನೇನು ನಾಟಕದ ಪ್ರಚಾರಕ್ಕೆ ಬೇಕಾದ ಕರಪತ್ರವನ್ನು ಮುದ್ರಿಸ ಹೊರಟಾಗ ನಾಲ್ಕಾರು ಸವಾಲುಗಳು ಧುತ್ತನೇ ಎದುರಾಗುತ್ತವೆ. ಕರಪತ್ರದಲ್ಲಿ ಊರ ಪ್ರಮುಖರ,ದಾನಿಗಳ, ರಾಜಕೀಯ ನಾಯಕರುಗಳ ಹೆಸರುಗಳನ್ನು ಹಾಕಿಸುವಲ್ಲಿ ತುಸು ಎಚ್ಚರ ತಪ್ಪಿದರೆ ಅನಗತ್ಯ ಟೀಕೆಗಳನ್ನು ಎದುರಿಸಬೇಕಾಗುತ್ತದೆ.ಹಾಗೆಯೇ ನಾಟಕ ನಡೆಸಬೇಕಾದ ಸೂಕ್ತ ಸ್ಥಳವನ್ನು ಆಯ್ಕೆ ಮಾಡುವುದು ಸವಾಲೇ ಆಗಿರುತ್ತದೆ.

### 5. ನಾಟಕ ನಡೆಯುವ ದಿನದ ಸವಾಲು:



ನಾಟಕ ನಡೆಯುವ ದಿನ ಅನಗತ್ಯವಾಗಿ ವೇದಿಕೆ ಎಡಬಲದಲ್ಲಿ ನಿಲ್ಲುವ ಪ್ರೇಕ್ಷಕರನ್ನು ಹೊರಗೆ ಕಳಿಸುವ, ಯಾವುದೇ ಗದ್ದಲ ಗಲಾಟೆಗಳಾಗದ ಹಾಗೆ ನೋಡಿಕೊಳ್ಳುವ, ಮಹಿಳಾ ಪಾತ್ರಧಾರಿಗಳಿಗೆ ಸೂಕ್ತ ರಕ್ಷಣೆ ಒದಗಿಸುವ, ಹೊರಗಿನಿಂದ ಬಂದ ಕಲಾವಿದರಿಗೆ, ರಂಗಸಜ್ಜಿಕೆ ನಿರ್ಮಾಣದವರಿಗೆ,ವಾದ್ಯವೃಂದದವರಿಗೆ ಊಟೋಪಚಾರದ ವ್ಯವಸ್ಥೆ ರೀತಿಯ ಹತ್ತಾರು ಸವಾಲುಗಳು ಆಯೋಜಕರ ಮುಂದೆ ಎದುರಾಗುತ್ತವೆ.

## ಅನುಸರಿಸಬೇಕಾದ ಮುಂಜಾಗ್ರತೆಗಳು.....

ಇಷ್ಟೆಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ನಾಟಕದ ಆಯೋಜಕರು ಕೆಲವೊಂದು ಮುಂಜಾಗ್ರತೆಗಳನ್ನು ಅನುಸರಿಸಬೇಕಾಗುತ್ತದೆ, ಅವುಗಳೆಂದರೆ....

### 1. ಸೂಕ್ತ ನಾಟಕವನ್ನು ಆಯ್ಕೆ ಮಾಡುವಲ್ಲಿ ಜಾಗೃತಿ ವಹಿಸಬೇಕಾಗುತ್ತದೆ:

ಮನೋರಂಜನೆಯ ಜೊತೆಗೆ, ಉತ್ತಮ ಸಂದೇಶವನ್ನು ಸಾರುವ,ಜೀವನ ಪಾಠಗಳನ್ನು ಹೇಳುವ ಅತ್ಯುತ್ತಮ ಕಥಾಹಂದರವುಳ್ಳ ಸಾಕಷ್ಟು ನಾಟಕಗಳಿವೆ. ಇಂತಹ ಉತ್ತಮ ನಾಟಕಗಳನ್ನು ಆಯ್ಕೆ ಮಾಡಿಕೊಂಡಾಗ ಪ್ರೇಕ್ಷಕರು ಮನಸ್ಸು ಕೊಟ್ಟು ನಾಟಕ ವೀಕ್ಷಣೆ ಮಾಡುತ್ತಾರೆ. ಹಾಗೆಯೇ ಪೌರಾಣಿಕ ನಾಟಕಗಳ ಸಮಯದಲ್ಲಿ ಆ ನಾಟಕದ ಪಾತ್ರಗಳಿಗೆ ನ್ಯಾಯ ಒದಗಿಸುವ ಪಾತ್ರಧಾರಿಗಳನ್ನು ಬಹು ಎಚ್ಚರಿಕೆಯಿಂದ ಆಯ್ಕೆ ಮಾಡುವುದು ಆಯೋಜಕರ ಪ್ರಮುಖ ಜವಾಬ್ದಾರಿ ಆಗಿರುತ್ತದೆ.

### 2. ನವಿರಾದ ಹಾಸ್ಯವಿರಲಿ:

ಕುಟುಂಬ ಸಮೇತರಾಗಿ ನಾಟಕ ವೀಕ್ಷಣೆಗೆ ಆಗಮಿಸುವುದರಿಂದ ನವಿರಾದ ಹಾಸ್ಯವುಳ್ಳ ಸಂಭಾಷಣೆಗಳು ಇರುವ ನಾಟಕದ ಆಯ್ಕೆ ಸೂಕ್ತ. ಕೆಲವೊಂದು ನಾಟಕಗಳಲ್ಲಿನ ಪಾತ್ರಗಳಲ್ಲಿ ಬರುವ ಅತಿಯಾದ ಅಶ್ಲೀಲ ಪದಗಳು ಪ್ರೇಕ್ಷಕರಿಗೆ ಕಿರಿಕಿರಿ ಉಂಟು ಮಾಡಬಹುದು.ಈ ಬಗೆಗೆ ನಾಟಕ ರಚನಕಾರರು ಎಚ್ಚರಿಕೆ ವಹಿಸಬೇಕಾಗುತ್ತದೆ. ನಗಿಸಲೇಬೇಕೆಂದು ಏನೇನೋ ಹೇಳುವುದು ಸೂಕ್ತವೆನಿಸಲಾರದು. ಹೀಗಾಗಿ ನಾಟಕದ ಆಯೋಜಕರು ಸಹ ಈ ತರ ಅಶ್ಲೀಲ ಸಂಭಾಷಣೆಗಳಿರುವ ನಾಟಕಗಳಿಗಿಂತ, ತಿಳಿಯಾದ ಹಾಸ್ಯವುಳ್ಳ ನಾಟಕಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವೆನಿಸುತ್ತದೆ.

### 3. ಆಡಂಬರದ ಆಚರಣೆಗಳಿಗೆ ಕಡಿವಾಣ ಹಾಕಬೇಕಿದೆ:

ಕೆಲವೊಂದು ಕಡೆ ನಾಟಕದಲ್ಲಿ ಪಾತ್ರಧಾರಿಗಳ ಆಗಮನದ ಸಮಯದಲ್ಲಿ ಅನಗತ್ಯವಾಗಿ ಪಟಾಕಿ, ಮತಾಪು ಹೊಡೆಯುವ ಅಭ್ಯಾಸ ಇತ್ತೀಚಿಗೆ ಅಲ್ಲಲ್ಲಿ ಕಂಡುಬರುತ್ತಿದೆ.ಇದು ಪ್ರೇಕ್ಷಕರಿಗೆ ಅನಗತ್ಯ ಕಿರಿಕಿರಿ ಅಲ್ಲವೇ? ಹಾಗೆಯೇ ದುಂದು ವೆಚ್ಚಕ್ಕೆ ಕಾರಣವಲ್ಲವೇ? ಹಾಗೆಯೇ ಕಿಡಿ ಹೊತ್ತಿಕೊಂಡು ಯಾವುದಾದರೂ ಅಗ್ನಿ ಅವಘಡಗಳು ಸಂಭವಿಸಿದರೆ ಯಾರು ಜವಾಬ್ದಾರರು? ಈ ಹಿನ್ನೆಲೆಯಲ್ಲಿ ಆದಷ್ಟು ಸರಳವಾಗಿ ಮತ್ತು ಅಚ್ಚುಕಟ್ಟಾಗಿ ನಾಟಕವನ್ನು ಆಯೋಜನೆ ಮಾಡುವ ಮೂಲಕ ನಾಟಕದ ಯಶಸ್ಸಿನತ್ತ ಗಮನ ಹರಿಸಬೇಕಿದೆ. ಅನಗತ್ಯ ವೆಚ್ಚಗಳಿಂದ ಕೈ ಸುಟ್ಟುಕೊಳ್ಳುವುದು ಬೇಡವೆನಿಸುತ್ತದೆ.

### 4. ಹಾಡು, ನೃತ್ಯಗಳು ಅಗತ್ಯದಷ್ಟಿರಲಿ:

ಕೆಲವೊಮ್ಮೆ ವಿಶೇಷವಾಗಿ ಸಾಮಾಜಿಕ ನಾಟಕಗಳಲ್ಲಿ ಅಗತ್ಯವಿಲ್ಲದಿದ್ದರೂ ಹಾಡುಗಳನ್ನು ಹಾಕುವ,ನೃತ್ಯ ಮಾಡುವ ಪರಿಪಾಠ ಅಷ್ಟೊಂದು ಉಚಿತವಲ್ಲ. ಪಾತ್ರಗಳ ಅಭಿನಯಕ್ಕೆ ಮತ್ತಷ್ಟು ಮೆರಗನ್ನು ಕೊಡುವ ಮತ್ತು ಪಾತ್ರಕ್ಕೆ ಹೊಂದುವಂತಹ ಹಾಡುಗಳನ್ನು ನಾಟಕದ ನಿರ್ದೇಶಕರುಗಳು, ಸಂಗೀತ ನಿರ್ದೇಶಕರುಗಳು ಈ ಮುಂಚೆಯೇ ಸಿದ್ಧಪಡಿಸಿಕೊಳ್ಳುವುದು ಒಳಿತು. ಇದರಿಂದ ಅಭಿನಯದ ಸಂದರ್ಭದಲ್ಲಿ ಯಾವುದೇ ಗೊಂದಲಗಳಿಲ್ಲದೆ, ಎಲ್ಲಿ ಹಾಡುಗಳು ಬರಬೇಕೆಂದು ತಿಳಿಯುತ್ತದೆ ಮತ್ತು ನಾಟಕವು ಸರಾಗವಾಗಿ ಸಾಗಲು ಅನುಕೂಲವಾಗುತ್ತದೆ.

### 5. ಹಿತವಾದ,ಮಿತವಾದ ಸಂಗೀತವಿರಲಿ:

ನಾಟಕದ ಮಧ್ಯಮಧ್ಯ ಕೆಲವೊಮ್ಮೆ ಅನಗತ್ಯವಾಗಿ ನೀಡುವ ಸಂಗೀತವೂ ಪಾತ್ರಧಾರಿಗಳ ಮಾತುಗಳನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲು ತೊಡಕುಂಟು ಮಾಡುವಂತಿರುತ್ತದೆ. ಸಂಗೀತ ನಿರ್ದೇಶಕರು ಪಾತ್ರಗಳಿಗೆ ತೀರಾ ಅಗತ್ಯವಾದ, ಮಾತುಗಳಿಗೆ ಪೂರಕವಾದ ಮತ್ತು ಕಿವಿಗಳಿಗೆ ಇಂಪು ನೀಡುವ ಸಂಗೀತದ ಕಡೆ ಗಮನಹರಿಸುವುದು ಸೂಕ್ತ. ನಾಟಕದ ನಿರ್ದೇಶಕರುಗಳು ಮತ್ತು ವಾದ್ಯವೃಂದದವರು ಸಮನ್ವಯತೆಯಿಂದ ಕಾರ್ಯನಿರ್ವಹಿಸಿದಾಗ ನಾಟಕ ಯಶಸ್ವಿಯಾಗಲು ಸಾಧ್ಯ.

### 6. ಕಮ್ಮಟ–ಶಿಬಿರಗಳಿಗೆ ಹಾಜರಾಗುವುದು:

ಹವ್ಯಾಸಿ ರಂಗಭೂಮಿಯ ನಾಟಕದ ನಿರ್ದೇಶಕರುಗಳು ಸಾಧ್ಯವಾದಲ್ಲಿ ನಾಟಕ ತರಬೇತಿಯ ಕಮ್ಮಟ, ಶಿಬಿರಗಳಿಗೆ ಹಾಜರಾಗುವುದರ ಮೂಲಕ, ನಿರ್ದೇಶನದ ಮತ್ತಷ್ಟು ಪಟ್ಟುಗಳನ್ನು ಕರಗತ ಮಾಡಿಕೊಳ್ಳಬಹುದು. ಹಾಗೆಯೇ ತಮ್ಮ ಸುತ್ತಮುತ್ತ ನಡೆಯುವ ನಾಟಕಗಳಿಗೆ ತೆರಳಿ ತಮಗಿಂತ ಹಿರಿಯ, ಅನುಭವಿ ನಿರ್ದೇಶಕರುಗಳಿಂದ ಸೂಕ್ತ ಮಾರ್ಗದರ್ಶನ ಪಡೆಯುವುದರಿಂದ ಹವ್ಯಾಸಿ ರಂಗಭೂಮಿಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಬಹುದು.

### 7. ಪಾತ್ರಧಾರಿಗಳು ಜವಾಬ್ದಾರಿಯನ್ನು ನಿಭಾಯಿಸ ಬೇಕಿದೆ:

ಸ್ವ ಇಚ್ಛೆಯಿಂದಲೋ ಅಥವಾ ಯಾರದೋ ಮಾತಿಗೆ ಕಟಿಬಿದ್ದು ಒಪ್ಪಿಕೊಂಡಿರುವ ಯಾವುದೇ ಪಾತ್ರವಾಗಲಿ ಅದಕ್ಕೆ ನ್ಯಾಯ ಒದಗಿಸಬೇಕಾದ ಜವಾಬ್ದಾರಿ ಪಾತ್ರಧಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ದೈನಂದಿನ ತಾಲೀಮುಗಳಿಗೆ ಕಡ್ಡಾಯವಾಗಿ ಹಾಜರಾಗುವ ಮೂಲಕ,ನಿರ್ದೇಶಕರ ಮಾರ್ಗದರ್ಶನವನ್ನು ಚಾಚೂ ತಪ್ಪದೆ ಪಾಲಿಸಿ, ನಾಟಕದ ಯಶಸ್ಸಿಗೆ ಕಾರಣವಾಗಬೇಕಿದೆ. ನಾಟಕದ ಯಶಸ್ಸಿಗೆ ನಾಟಕದ ಪ್ರತೀ ಪಾತ್ರವೂ ಮುಖ್ಯವಾಗಿರುತ್ತದೆ ಎಂಬುದನ್ನು ಮನಗಾಣಬೇಕಿದೆ.

### 8. ಸ್ತ್ರೀ ಪಾತ್ರಧಾರಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕಿದೆ:

ನಾಟಕದ ಅಭಿನಯಕ್ಕೆ ಬರುವ ಸ್ತ್ರೀ ಪಾತ್ರಧಾರಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕಿದೆ. ಅವರಲ್ಲಿರುವ ಕಲೆಯನ್ನು ಗೌರವಿಸಬೇಕಿದೆ.ಯಾವುದೇ ಕಾರಣಕ್ಕೂ ಅವರೊಂದಿಗೆ ಅನುಚಿತವಾಗಿ ವರ್ತಿಸದಂತೆ ಆಯೋಜಕರು ತಮ್ಮ ಪಾತ್ರಧಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಒಳಿತು. ಹಲವಾರು ಕಡೆ ಮಹಿಳೆಯರನ್ನ ಅತ್ಯಂತ ಗೌರವದಿಂದ ನಡೆಸಿಕೊಂಡ ಉದಾಹರಣೆಗಳು ಇವೆ.

### 9. ನಾಟಕ ನಡೆಯುವ ಸಮಯದಲ್ಲಿ ಸೌಜನ್ಯದ ನಡವಳಿಕೆ ಬೇಕಿದೆ:

ನಾಟಕದ ರಂಗಸಜ್ಜಿಕೆಯಲ್ಲಿ ತಮ್ಮದೇನೂ ಕೆಲಸವಿಲ್ಲದಿದ್ದರೂ ಅನಗತ್ಯವಾಗಿ ನಿಲ್ಲುವುದು, ಅನಗತ್ಯ ಶಿಳ್ಳೆ,ಕೇಕೆ ಹೊಡೆಯುವುದು.... ಮೊದಲಾದ ಅನುಚಿತ ವರ್ತನೆಗಳನ್ನು ತೋರದೆ, ತಮ್ಮದೇ ಊರಿನ ಕಲಾವಿದರನ್ನು ಗೌರವಿಸುವ ಸೌಜನ್ಯದ ನಡವಳಿಕೆಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕಿದೆ. ಚಂದವಾಗಿ ಕುಳಿತು ನಾಟಕವನ್ನು ಆಸ್ವಾದಿಸಬೇಕಿದೆ. ಹಾಗೆಯೇ ಯಾವುದೇ ಗದ್ದಲ, ಗೊಂದಲಗಳು ಉಂಟಾಗದಂತೆ ತಡೆಯಲು ಆರಕ್ಷಕ ಸಿಬ್ಬಂದಿಯ ನೆರವನ್ನು ಪಡೆಯಬೇಕಿದೆ.

**ಕೊನೆಯ ಮಾತು:** ಜೀವನವೇ ಒಂದು ನಾಟಕ. ಕಾಣದ ದೇವರೇ ನಿರ್ದೇಶಕ. ನಾವೆಲ್ಲಾ ಪಾತ್ರಧಾರಿಗಳು ಎಂಬ ತಾತ್ವಿಕ ಮಾತು ಬಹು ವಿಶಾಲ ಅರ್ಥವುಳ್ಳದ್ದು. ಹಾಗೋ ಹೀಗೋ ಬಹು ತ್ರಾಸಪಟ್ಟು ಪ್ರತಿ ಉತ್ಸವ, ಹಬ್ಬ, ಜಾತ್ರೆಗಳ ಸಮಯದಲ್ಲಿ ಬಹುವಾಗಿ ಆಯೋಜನೆಗೊಳ್ಳುವ ಹವ್ಯಾಸಿ ನಾಟಕಗಳು ನಿರಂತರವಾಗಿ ಸಾಗಲು, ಜನರ ಮನರಂಜನೆಗೆ ಹೊಸ ಹೊಳಪು ತರಲು.... ಜೀವನ ಪಾಠಗಳನ್ನು ಕಲಿಸಲು.....ಒಂದಷ್ಟು ಸುಧಾರಣೆಗಳನ್ನು ಅಳವಡಿಸಿಕೊಳ್ಳಲಿ .... ಏನಂತೀರಾ?

# ಮಾನವೀಯ ಸಂಬಂಧಗಳ ಅವಶ್ಯಕತೆ

– ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ

ಮೂಲತಃ ಮನುಷ್ಯ ಸಮಾಜ ಜೀವಿ. ಸಾಮಾಜಿಕ ಸಂಬಂಧಗಳು ಆತನ ಬದುಕಿನ ಅವಶ್ಯಕತೆ. ನಮ್ಮ ಮನೆಯ ಶುಭಾಶುಭ ಕಾರ್ಯಕ್ರಮಗಳಲ್ಲಿ ನಮ್ಮವರ ಪಾಲ್ಗೊಳ್ಳುವಿಕೆ ಅತ್ಯವಶ್ಯಕ. ಸುಖದ, ಸಂತೋಷದ ಕ್ಷಣಗಳಲ್ಲಿ ನಮ್ಮ ಖುಷಿಯನ್ನು ಹಂಚಿಕೊಳ್ಳಲು, ಸಂತಸವನ್ನು ಇಮ್ಮಡಿಗೊಳಿಸಲು ನಮಗೆ ಸಾಮಾಜಿಕ, ಕೌಟುಂಬಿಕ ಸಂಬಂಧಗಳು ಬೇಕು. ಅಂತೆಯೇ ದುಃಖದ,ನೋವಿನ ಘಳಿಗೆಗಳಲ್ಲಿ ನಮ್ಮ ನೋವನ್ನು ಶಮನಗೊಳಿಸುವ ಪರಿಹಾರವನ್ನು ಸೂಚಿಸುವ ನಾವು ಇರ್ತೀವಿ ಬಿಡು, ತಲೆ ಕೆಡಿಸಿಕೊಳ್ಳಬೇಡ ಎಂದು ಧೈರ್ಯ ಹೇಳುವ ಸಾಮಾಜಿಕ ಸಂಬಂಧಗಳು ನಮ್ಮ ಜೀವನಕ್ಕೆ ಮರುಭೂಮಿಯಲ್ಲಿರುವ ಓಯಸಿಸ್ ನಂತೆ ಅತ್ಯವಶ್ಯಕ.

ವಿವಾಹವೇ ಇರಲಿ ಮಸಣವೇ ಇರಲಿ ನಮ್ಮವರ ಹಾಜರಿಯ ಅಗತ್ಯ ನಮಗಿದೆ. ನಮ್ಮ ಹೆಣವನ್ನು ನಾವೇ ಹೊರುವುದಿಲ್ಲ, ಅದನ್ನು ಹೊರಲಾದರೂ ನಮಗೆ ನಮ್ಮ ಸಂಬಂಧಿಗಳು, ಸ್ನೇಹಿತರು, ಬಂಧು ಬಾಂಧವರು ಬೇಕೇ ಬೇಕು. ನಮ್ಮ ಜೀವನದ ಅತ್ಯಂತ ನಿರಾಶಾದಾಯಕ ಸಮಯದಲ್ಲಿ ನಮಗೆ ಬೇರೊಬ್ಬರ ಸಲಹೆಯ ಅವಶ್ಯಕತೆ ಇರುವುದಿಲ್ಲ. ಯಾರ ಸಲಹೆಗಳೂ ನಮ್ಮ ಮನಸ್ಸಿಗೆ ಸಮಾಧಾನವನ್ನು ಕೊಡುವುದಿಲ್ಲ,ಅಂತಹ ಸಂದಿಗ್ಧದ ಸಮಯದಲ್ಲಿ ನಮಗೆ ಬೇಕಾಗಿರುವುದು ಮಾನವೀಯ ಸಂಬಂಧಗಳಾದ ಸಹಾನುಭೂತಿ, ಸಹನೆ, ಪ್ರೀತಿ, ನಂಬಿಕೆ ಮತ್ತು ವಿಶ್ವಾಸಗಳು. ನಿನ್ನ ಯಾವುದೇ ಕಷ್ಟದಲ್ಲೂ ನಾನು ನಿನ್ನ ಜೊತೆಗಿದ್ದೇನೆ ಎಂಬ ಸಾಂತ್ವನ ನಾನು ಒಬ್ಬಂಟಿಯಲ್ಲ ಎಂಬ ಭಾವವನ್ನು ನೀಡುತ್ತದೆ. ಈ ರೀತಿಯ ಅಗಾಧ ಭರವಸೆಯು ಬದುಕುವ ಹೊಸ ಹುಮ್ಮಸ್ಸನ್ನು ನೀಡುತ್ತದೆ.

ನೋವು ಎನ್ನುವುದು ಸಂಪೂರ್ಣ ವೈಯುಕ್ತಿಕವಾದ ಮಾನಸಿಕ ಸ್ಥಿತಿಯಾಗಿದ್ದು ಅದನ್ನು ನಾವು ಮಾತ್ರ ಎದುರಿಸಬೇಕು... ಆದರೆ ಆ ನೋವಿನ ಸಂದರ್ಭದಲ್ಲಿಯೂ ಯಾರಾದರೂ ನಮ್ಮ ಜೊತೆಗಿದ್ದಾರೆ ಎಂಬ ಸಹಾನುಭೂತಿ ನಮ್ಮನ್ನು ಕುಸಿಯದಂತೆ ತಡೆಯುತ್ತದೆ. ಅದೆಷ್ಟೇ ನಾನು ನನ್ನನ್ನು ಕಳೆದುಕೊಂಡಿದ್ದೇನೆ ಎಂದು ಮನಸ್ಸು ಖಿನ್ನವಾದರೂ ಇಂತಹ ಸಮಯದಲ್ಲಿ ನನ್ನವರು ನನ್ನ ಜೊತೆಗಿದ್ದಾರೆ ಎಂಬ ಭಾವವೇ ಆಸರೆಯನ್ನು ಕಲ್ಪಿಸುತ್ತದೆ.

ಇಂತಹ ಘಳಿಗೆಗಳಲ್ಲಿ ಮೌನ ಅತ್ಯುತ್ತಮ ಸಂವಾಹಕವಾಗಿದ್ದು ಮೌನ ಜೊತೆಯಾಗಿರುವಿಕೆಯು ಧೈರ್ಯ ನೀಡುತ್ತದೆ. ಈ ಮೌನ ಕೊಡುವಷ್ಟು ಪರಿಶುದ್ಧವಾದ ಆಪ್ತತೆಯನ್ನು ಮಾತುಗಳು ಕಟ್ಟಿಕೊಡಲು ಸಾಧ್ಯವಿಲ್ಲ. ಪ್ರೀತಿಯ ಪರಿಪೂರ್ಣ ಭಾವ ನಮ್ಮನ್ನು ನಾವು ಯಾರು ಎಂದು ಗುರುತಿಸಿಕೊಳ್ಳಲು ಸಹಾಯವೆಸಗುತ್ತದೆ.

ಆದ್ದರಿಂದಲೇ ನಮ್ಮ ಪ್ರಾಚೀನರು

**ಓಂ ಸಂಘಚ್ಛದ್ವಂ ಸಂವಧದ್ವಂ**
**ಸಮ್ಮೋಮನಾಂಸಿ ಜಾನತಾಂ**
**ದೇವಾ ಭಾಗಮ್ ಯಥಾ ಪೂರ್ವೆ**
**ಸಂಜಾನಾನಾ ಉಪಾಸತೆ**

ಎಂದು ಪ್ರಾರ್ಥನೆಗೈಯುತ್ತಿದ್ದರು. ಈ ಪ್ರಾರ್ಥನೆಯ ತಾತ್ಪರ್ಯ ಹೀಗಿದೆ.

ನಾವೆಲ್ಲರೂ ಸಂಘಟಿತರಾಗಿ ಒಂದು ಉನ್ನತ ಧ್ಯೇಯದೆಡೆಗೆ ಸಾಗೋಣ. ಸಂಘಟನೆಯ ನಿಯಮಗಳನ್ನು ಪಾಲಿಸೋಣ. ವಿಶಾಲ ಹೃದಯ ಮತ್ತು ಮನಸ್ಸನ್ನು ಹೊಂದಿದವರಾಗಿ ಸಾಮರಸ್ಯದಿಂದ ಜೊತೆಯಾಗಿ ಕಾರ್ಯ ನಿರ್ವಹಿಸೋಣ.... ಎಂಬ ಅರ್ಥವನ್ನು ಹೊಂದಿರುವ ಈ ಪ್ರಾರ್ಥನಾ ಮಂತ್ರವನ್ನು ನಾವು ಯಾವುದೇ ಭಾರತೀಯ ಯೋಗ ಮತ್ತು ಆಧ್ಯಾತ್ಮದ ಕಾರ್ಯಕ್ರಮದ ಅಂತ್ಯದಲ್ಲಿ ಸಾಮೂಹಿಕವಾಗಿ ಉಚ್ಚರಿಸಲು ಕಾರಣವಾಗಿರುವುದು ಇದರಲ್ಲಿರುವ ಉನ್ನತ ಧ್ಯೇಯ. ಸಾಂಘಿಕ ಬದುಕಿನ ಮಹತ್ವವನ್ನು ಸಾರುವ ಈ ಮಂತ್ರೋಚ್ಚಾರಣೆ ನಮ್ಮ

ಮೈ ಮನಗಳಲ್ಲಿ ಭ್ರಾತೃತ್ವದ ಭಾವವನ್ನು ತುಂಬಿ ನಮ್ಮನ್ನು ಸಂಘ ಜೀವಿಯನ್ನಾಗಿಸುತ್ತದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ತಾಯಿ

ತಾಯಿ ಇಲ್ಲದ ಮಕ್ಕಳು
ಅನಾಥವಾದ ಜೀವಗಳು
ತಾಯಿಯೇ ಬಾಳಿನ ಜ್ಯೋತಿ
ತಾಯಿಯೇ ಮನೆಯ ಕಾಂತಿ॥

ತಾಯಿ ಇದ್ದರೆ ಸುಖ ಶಾಂತಿ
ತಾಯಿ ಇಲ್ಲದ ಮನೆ ಅಶಾಂತಿ
ತಾಯಿಯೇ ಸ್ಪೂರ್ತಿಯ ತಾಣ
ತಾಯಿಯೇ ಮಮತೆಯ ಉಗ್ರಾಣ॥

ತಾಯಿಯೇ ಮಕ್ಕಳಿಗೆ ದೇವರು
ತಾಯಿಯೇ ಮಕ್ಕಳಿಗೆ ತವರು
ತಾಯಿಯೇ ಜೀವಕ ಪ್ರಿತಿಯ ಜೀವ
ತಾಯಿಯೇ ಮಕ್ಕಳಿಗೆ ಮಧುರ ಭಾವ॥

ತಾಯಿಯಿಂದಲೇ ಆ ಮನೆ ಬೃಂದಾವನ
ತಾಯಿಯೇ ಶಾಂತಿ ತೋಟದ ವನ
ತಾಯಿ ನಕ್ಕರೆ ಆ ಮನೆ ಸ್ವರ್ಗ ಧಾಮ
ತಾಯಿಯಿಂದ ಮಕ್ಕಳು ಅರಳುವ ಮನ॥

ತಾಯಿಯೇ ನಿಸ್ವಾರ್ಥ ಜೀವನ ಸಂಕೇತ
ತಾಯಿಯೇ ನೋವುಂಡು ಇರುವ ಅಮೃತ
ತಾಯಿಯ ನೆರಳಲಿ ಬೆಳೆದರೆ ಶಾಶ್ವತ
ತಾಯಿಯ ನೆನಪಲಿ ಇರಬೇಕು ನಿತ್ಯ॥

ತಾಯಿಯೇ ಮೊದಲ ದೇವರು ತಿಳಿಯೋ
ತಾಯಿಯ ತ್ಯಾಗಕೆ ಸಾಟಿ ಬೇರಿಲ್ಲ
ತಿಳಿಯೋ
ತಾಯಿಯೇ ಈ ಜಗದ ಕಣ್ಣು ಕಾಣಿರೋ
ತಾಯಿಯೇ ನೂರು ಕಾಲ ಬದುಕಲು
ಬೇಡಿರೋ॥

ತಾಯಿಯೇ ಇನ್ನೊಂದು ದೇವರು
ತಾಯಿಯ ಪೂಜ್ಯತೆಯಿಂದ ಪೂಜಿಸಿರೋ
ತಾಯಿಯ ಹರಕೆಯ ನಿತ್ಯ ಬೇಡಿರೋ
ತಾಯಿಯೇ ಮಾನವ ರೂಪದ ದೇವರು॥

ತಾಯಿಯಿಂದಲೇ ಜೀವನ ಪಾವನ
ತಾಯಿಯ ಕಡೆಗಣಿಸಿದರೆ ಅದೇ ನರಕ
ತಾಯಿಯ ಪ್ರಿತಿಯಲಿ ಕಳೆಯಿರಿ ಜೀವನ
ತಾಯಿಯ ನೆನೆಯುತ ಮಾಡಿರಿ ಕಾಯಕ॥

– **ಚಂದ್ರಶೇಖರಯ್ಯ ರೋಣದಮಠ**

### ನನ್ನೊಡಲ ಬಳ್ಳಿ

ತಬ್ಬಿ ಹಿಡಿದಿಹಳು ನನ್ನೊಡಲ ಬಳ್ಳಿ
ತುಂಟತನ ಮಾಡುವ ಭಾರಿ ಕಳ್ಳಿ
ಎಲ್ಲರನೂ ಮರುಳು ಮಾಡುವ ಮಳ್ಳಿ
ಆಕಾಶದ ಎತ್ತರಕೆ  ಹಾರುವ ಕುಳ್ಳಿ

ತಾಯ್ತನವ ಹೆಮ್ಮೆಯಲಿ ಮೆರೆಸುವ ಪೋರಿ
ನಾಟ್ಯವಾಡುವಳು ತೊಟ್ಟು ನವಿಲ ಗರಿ
ಮಿಂಚಿನ ಕಣ್ಣೋಟದಲೆ ಹಾಕುವಳು
ಚೂರಿ
ಮೂರ್ತಿ ಚಿಕ್ಕದಾದರೂ ಮಾತು ಭಾರಿ

ಬಾಲ್ಯದ ತುಂಟಾಟ ನೋಡಲು ಸೊಗಸು
ಬೇಕಾದ್ದು ಸಿಗದಿರೆ ತೋರುವರು ಮುನಿಸು
ಹಸನಾಗಲಿ ಬದುಕು ಬಯಸುವುದು
ಮನಸು
ಹಬ್ಬಿದರೆ ಒಡಲಬಳ್ಳಿ ಕನಸೆಲ್ಲಾ ನನಸು

~ **ಚೇತನ ಭಾರ್ಗವ** ಬೆಂಗಳೂರು

## ಮೈಕ್ರೋ ನ್ಯೂಸ್

### ತೊಗರಿ ಖರೀದಿಸಲು ಮೇ.01ರವರೆಗೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ರಾಯಚೂರು**

ಕೃಷಿ ಮಾರಾಟ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಖರೀದಿಸಲು ಮೇ.01ರವರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ. ಕೃಷ್ಣ ಅವರು ತಿಳಿಸಿದ್ದಾರೆ.

ಕೇಂದ್ರಸರಕಾರದ ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೊಗರಿ ಖರೀದಿ ಪ್ರಕ್ರಿಯೆ ಜಿಲ್ಲೆಯಲ್ಲಿ ಈಗಾಗಲೇ ಚಾಲ್ತಿಯಲ್ಲಿದ್ದು, ರೈತರ ಹಿತದೃಷ್ಟಿಯಿಂದ ತೊಗರಿ ಖರೀದಿಗೆ ನೋಂದಣಿಯನ್ನು ಏಪ್ರಿಲ್-25ರವರೆಗೆ ಮತ್ತು ಭೌತಿಕ ತೊಗರಿ ಖರೀದಿಗೆ ಮೇ-1ರವರೆಗೆ ವಿಸ್ತರಣೆ ಮಾಡಿ ಸರಕಾರ ಆದೇಶ ಹೊರಡಿಸಿದೆ.

ಕೇಂದ್ರ ಸರಕಾರವು ಬೆಂಬಲ ಬೆಲೆ ಯೋಜನೆಯಡಿ ತೊಗರಿಗೆ ಪ್ರತೀ ಕ್ವಿಂಟಾಲ್ 7,550 ರೂ. ನಿಗದಿಪಡಿಸಿದ್ದು, ಇದಕ್ಕೆ ರಾಜ್ಯ ಸರಕಾರದಿಂದ ಪ್ರೋತ್ಸಾಹಧನ 450ರೂ. ಪ್ರತೀ ಕ್ವಿಂಟಾಲ್ ಗೆ 8,000 ರೂ. ದರ ನಿಗದಿಪಡಿಸಿದೆ. ಪ್ರತೀ ಎಕರೆಗೆ 4 ಕ್ವಿಂಟಾಲ್ ಮತ್ತು >>4

# ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿ ದೇಶ - ರಾಜ್ಯಗಳನ್ನು ಅಭಿವೃದ್ಧಿಪಡಿಸಬೇಕು

## ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ । ಕರ್ನಾಟಕ ಭವನ-2ರ ನವೀಕರಣ ಭರವಸೆ





**ನವದೆಹಲಿ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿ ದೇಶ ಮತ್ತು ರಾಜ್ಯಗಳನ್ನು ಅಭಿವೃದ್ಧಿಪಡಿಸಬೇಕೆಂಬುದನ್ನು ಸಂವಿಧಾನ ಸ್ಪಷ್ಟಪಡಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ದೆಹಲಿಯಲ್ಲಿ ನೂತನವಾಗಿ ನಿರ್ಮಿಸಿರುವ ಕರ್ನಾಟಕ ಭವನ-1ರ ಕಟ್ಟಡವನ್ನು ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಉಪಸ್ಥಿತಿಯಲ್ಲಿ ಬುಧವಾರ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಯಾವುದೇ ರಾಜ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರಿಂದ ತೆರಿಗೆಯನ್ನು ವಸೂಲು ಮಾಡುತ್ತವೆ. ಐದು ವರ್ಷಕ್ಕೊಮ್ಮೆ ರಚನೆಯಾಗುವ ಹಣಕಾಸಿನ ಆಯೋಗದ ಶಿಫಾರಸ್ಸಿನಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ತೆರಿಗೆಯ ಪಾಲು ನಿಗದಿಯಾಗುತ್ತದೆ. ಅನುದಾನದಲ್ಲಿ ಕೇಂದ್ರ ಸರ್ಕಾರದ ಅನೇಕ ಕಾರ್ಯಕ್ರಮಗಳೂ ಸೇರಿದ್ದು, ಕೇಂದ್ರ ಪುರಸ್ಕೃತ ಯೋಜನೆಗಳೂ ಇರುತ್ತವೆ. ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾಲು ಇರುತ್ತದೆ ಎಂದರು.

ಭಾರತದ ಒಕ್ಕೂಟದ ವ್ಯವಸ್ಥೆಯಲ್ಲಿ , ಬಾಬಾ ಸಾಹೇಬ್ ಅಂಬೇಡ್ಕರ್ ರವರು ನೀಡಿದ ಸಂವಿಧಾನದ ಅನ್ವಯ ಸೆಂಟ್ರಲ್ ಲಿಸ್ಟ್, ಸ್ಟೇಟ್ ಲಿಸ್ಟ್ ಹಾಗೂ ಕನ್ಕರೆಂಟ್ ಲಿಸ್ಟ್ ಎಂದು ಅಧಿಕಾರ ಹಂಚಿಕೆಯಾಗಿದೆ. ಇದರನ್ವಯ ಕೇಂದ್ರ , ರಾಜ್ಯಗಳು ಕಾನೂನುಗಳನ್ನು ರಚಿಸಿದರೆ, ಕನ್ಕರೆಂಟ್ ಲಿಸ್ಟ್ ನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ಕಾನೂನನ್ನು ರಚಿಸುತ್ತವೆ. ಕೇಂದ್ರಸರ್ಕಾರದ ಕೇಂದ್ರಸ್ಥಾನವಾದ ನವದೆಹಲಿಯಲ್ಲಿ ಪ್ರತಿಯೊಂದು ರಾಜ್ಯಗಳ ಭವನಗಳು ಇರುತ್ತವೆ. ನವದೆಹಲಿಯಲ್ಲಿ ಒಟ್ಟು ಮೂರು ಕರ್ನಾಟಕ ಭವನಗಳಿದ್ದು, ಇಲ್ಲಿಗೆ ಆಗಮಿಸುವ ಮಂತ್ರಿಗಳು, ಸಂಸದರು, ಹಾಲಿ ಹಾಗೂ ಮಾಜಿ ಶಾಸಕರು, ಅಧಿಕಾರಿಗಳಿಗೆ ಅನುಕೂಲ ಕಲ್ಪಿಸಲಾಗಿದೆ.

1967 ರಲ್ಲಿ ಕರ್ನಾಟಕ ಭವನಕ್ಕೆ ಶಂಕುಸ್ಥಾಪನೆಯನ್ನು ಲಾಲ್ ಬಹದ್ದೂರ್ ಶಾಸ್ತ್ರಿಯವರು ನೆರವೇರಿಸಿದ್ದು, ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ಉದ್ಘಾಟನೆ ಮಾಡಿದ್ದರು ಹಾಗೂ ನಿಜಲಿಂಗಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು ಎಂದು ಮುಖ್ಯಮಂತ್ರಿಗಳು ಸ್ಮರಿಸಿದರು. 51 ವರ್ಷಗಳ ಕಾಲ ಕರ್ನಾಟಕ ಭವನ ಕಾರ್ಯನಿರ್ವಹಿಸಿದೆ. ತಜ್ಞರ ಅಭಿಪ್ರಾಯದಂತೆ ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಕಟ್ಟಲು ತೀರ್ಮಾನಿಸಲಾಗಿತ್ತು. 2018 ರ ಬಜೆಟ್ ನಲ್ಲಿ ಘೋಷಣೆಯಾಗಿ 2019 ರಲ್ಲಿ ಕಾಮಗಾರಿ ಪ್ರಾರಂಭವಾಯಿತು. ಈವರೆಗೆ 8 ವರ್ಷಗಳ ವಿಳಂಬವಾಗಿದೆ. ಸಚಿವರ ಕೊಠಡಿಗಳು ಉತ್ತಮವಾಗಿದ್ದು, ಶಾಸಕರ ಕೊಠಡಿಗೆ ಸಿಟ್ ಔಟ್ ಅಗತ್ಯವಿದ್ದು ಈ ಬಗ್ಗೆ ಸರ್ಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಿದೆ ಎಂದರು.

ಕರ್ನಾಟಕ ಭವನದಲ್ಲಿ ನಾಳೆಯಿಂದಲೇ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ತಿಳಿಸಿದರು.

ರಾಯಭಾರಿ ಕಚೇರಿಯಾಗಿ ಕೆಲಸ ಮಾಡಲಿ

ಕರ್ನಾಟಕ ಭವನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರಾಯಭಾರಿ ಕಛೇರಿಯಾಗಿ ಕೆಲಸ ಮಾಡಲಿ ಎಂದು ಮುಖ್ಯಮಂತ್ರಿಗಳು ಹಾರೈಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಅಭಿವೃದ್ಧಿಯಾಗಬೇಕು

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪರಸ್ಪರ ಅಭಿವೃದ್ಧಿಯಾದಾಗ ದೇಶ ಅಭಿವೃದ್ಧಿಯಾಗುತ್ತದೆ. ಈ ದಿಕ್ಕಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟುಗೂಡಿ ಕೆಲಸ ಮಾಡಲು ಪ್ರಯತ್ನ ಮಾಡಬೇಕು.ನಾವು ಒಕ್ಕೂಟದ ವ್ಯವಸ್ಥೆಯಲ್ಲಿರುವುದರಿಂದ ಒಟ್ಟಾಗಿ ಅಭಿವೃದ್ಧಿಯಾಗುವುದು ಅಗತ್ಯ. ಈ ದಿಕ್ಕಿನತ್ತ ಸಚಿವರು, ಅಧಿಕಾರಿಗಳು ಪ್ರಯತ್ನ ಮಾಡಬೇಕು.

**ಕರ್ನಾಟಕ ಭವನ-2 ರ ನವೀಕರಣದ ಭರವಸೆ:** ಕರ್ನಾಟಕ ಭವನ-2 ರ ನವೀಕರಣ ಮಾಡುವ ಅಗತ್ಯವಿದ್ದು, ನವೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಡಾ. ಮಹಾದೇವಪ್ಪ, ರಾಜಣ್ಣ, ಕೆ.ಎಚ್. ಮುನಿಯಪ್ಪ ಮತ್ತಿತರರು ಹಾಜರಿದ್ದರು.

# ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳ ನೇಮಕ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಸರ್ಕಾರದ ಇಡಿಸಿಎಸ್ ನಿರ್ದೇಶನಾಲಯದ ಇ-ಆಡಳಿತ ಇಲಾಖೆಯ ನಿರ್ದೇಶನದಂತೆ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳನ್ನು ನೇಮಕ ಮಾಡಲು ಆಸಕ್ತ ಅರ್ಹ ಆಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಜಿಲ್ಲೆಯ 02 ಗ್ರಾಮ - ಒನ್ ಕೇಂದ್ರಗಳಿಗೆ ಫ್ರಾಂಚೈಸಿಯನ್ನು ನೇಮಕ ಮಾಡಲು ಉದ್ದೇಶಿಸಲಾಗಿದೆ. ಬಳ್ಳಾರಿ ತಾಲ್ಲೂಕಿನ ಶಿಡಗಿನ ಮೊಳ ಮತ್ತು ಸಂಡೂರು ತಾಲ್ಲೂಕಿನ ಭುಜಂಗನಗರ ಗ್ರಾಮ ಪಂಚಾಯತಿ. ಖಾಲಿಯಿರುವ ಗ್ರಾಮ ಒನ್ ಕೇಂದ್ರಗಳ ವಿವರ ಮತ್ತು ಅರ್ಜಿ ಸಲ್ಲಿಸಲು https://kal-mys. gramaone.karnataka.gov.in/ ಗೆ ಭೇಟಿ ನೀಡಬಹುದು. ನಾಗರೀಕ ಸೇವಾ ಕೇಂದ್ರ ಗ್ರಾಮ ಒನ್ ಫ್ರಾಂಚೈಸಿಯನ್ನು ಬಯಸುವವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಏಪ್ರಿಲ್ 15 ಕೊನೆಯ ದಿನ ಆಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ತಿಳಿಸಿದ್ದಾರೆ.

# ಆಸ್ತಿಯ ಎ ಖಾತ, ಬಿ ಖಾತ ಸುಲಭವಾಗಿ ಪಡೆದುಕೊಳ್ಳಿ

## ಇ-ಖಾತಾ ಅಭಿಯಾನಕ್ಕೆ ಕೊಪ್ಪಳ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಚಾಲನೆ

**ಹಂಪಿ ಟೈಮ್ಸ್ ಕೊಪ್ಪಳ**

ಸಾರ್ವಜನಿಕರು ತಮ್ಮ ಆಸ್ತಿಯ ಎ ಖಾತ ಮತ್ತು ಬಿ ಖಾತವನ್ನು ಸುಲಭವಾಗಿ ಪಡೆದುಕೊಳ್ಳುವಂತೆ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು.

ಅವರು ಗುರುವಾರ ನಗರದ ಮೂರನೇ ವಾರ್ಡಿನಲ್ಲಿ ಕೊಪ್ಪಳ ನಗರಸಭೆ ವತಿಯಿಂದ ಹಮ್ಮಿಕೊಂಡಿದ್ದ ಕೊಪ್ಪಳ ನಗರಸಭೆ ಕಾರ್ಯಾಲಯದ ವತಿಯಿಂದ ಇ-ಖಾತಾ ಅಭಿಯಾನ ಮತ್ತು ಎ ಖಾತ ಮತ್ತು ಬಿ ಖಾತ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸುಮಾರು ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ ಖಾತಾ ಮತ್ತು ಬಿ ಖಾತ, ಎಂಬಿ ನಂಬರ್ ನಮೂನೆ 3 ನ್ನು ಪಡೆಯಲು ಸಾರ್ವಜನಿಕರು ಪರದಾಡುವಂತ ಸ್ಥಿತಿ ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ ಮನೆಬಾಗಿಲಿಗೆ ಎ ಖಾತ ಮತ್ತು ಬಿ ಖಾತ ಫಾರಂ ನಂಬರ್ 3ರ ವಿತರಣೆ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದರಿಂದಾಗಿ ತುಂಬಾ ಅನುಕೂಲವಾಗಿದೆ. ನಮ್ಮ ಸರ್ಕಾರವು ಹಮ್ಮಿಕೊಂಡಿರುವ ಈ ಅಭಿಯಾನದಡಿ ಮೂರು ತಿಂಗಳ ಒಳಗಾಗಿ ಕೊಪ್ಪಳ ನಗರದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಎ ಖಾತ ಬಿ ಖಾತದಿಂದ ಜನರಿಗೆ ಸರ್ಕಾರದಿಂದ ವಿವಿಧ ಗೃಹ ಯೋಜನೆಗಳಡಿ ಸಹಾಯಧನ, ಸಾಲ ಸೌಲಭ್ಯಗಳು ಅತ್ಯಂತ ಸುಲಭವಾಗಿ ಸಿಗಲಿವೆ. ಇಂತಹ ನೂತನ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿದ್ದು, ಇದರಿಂದ ಕೊಪ್ಪಳ ನಗರಸಭೆ ವ್ಯಾಪ್ತಿಯ ಸುಮಾರು 8 ಸಾವಿರಕ್ಕೂ ಅಧಿಕ ನಿವೇಶನಗಳು, ಆಶ್ರಯ ಮನೆಗಳಿಗೆ ಅನುಕೂಲವಾಗಲಿದೆ. ಕೊಪ್ಪಳ ನಗರದ ಪ್ರತಿಯೊಬ್ಬರು ತಮ್ಮ ಮನೆಯ ಆಸ್ತಿ ದಾಖಲೆಯ ಪತ್ರಗಳನ್ನು ನೀಡಿ, ಎ ಖಾತ ಮತ್ತು ಬಿ ಖಾತ ಪಡೆದುಕೊಂಡು ಈ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಸಾರ್ವಜನಿಕರಿಗೆ ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆಯ ಉಪಾಧ್ಯಕ್ಷರಾದ ಅಶ್ವಿನಿ ಗದುಗಿನಮಠ್, ಪೌರಾಯುಕ್ತರಾದ ಗಣಪತಿ ಪಾಟೀಲ್, ಓಣಿಯ ಹಿರಿಯರಾದ ಖಾಜಾ ಹುಸೇನ್ ರೆವಡಿ, ಸಲೀಂ ಅಳವಂಡಿ, ಹಜರತ್ ಮುಜಾವರ್ ಸೇರಿದಂತೆ ನಗರಸಭೆಯ ಕಂದಾಯ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಮತ್ತಿತರರು ಉಪಸ್ಥಿತರಿದ್ದರು.

# ತಾಲೂಕು ಕಸಾಪದಿಂದ ಕುಂವೀಗೆ ಸನ್ಮಾನ



**ಹಂಪಿ ಟೈಮ್ಸ್ ಕೊಟ್ಟೂರು**

ಹಂಪಿಯ ಕನ್ನಡ ವಿವಿಯ ನಾಡೋಜ ಗೌರವ ಪದವಿಗೆ ಆಯ್ಕೆಯಾದ ಲೇಖಕ ಕುಂ. ವೀರಭದ್ರಪ್ಪ ಅವರನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗುರುವಾರ ಸನ್ಮಾನಿಸಿ ಅಭಿನಂದನೆ ಸಲ್ಲಿಸಲಾಯಿತು.

ಪಟ್ಟಣದ ಕೋಟೆ ಪ್ರದೇಶದಲ್ಲಿರುವ ಕುಂವೀ ಮನೆಗೆ ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ್ ಹಾಗೂ ಪದಾಧಿಕಾರಿಗಳು ತೆರಳಿ ಶಾಲು ಹೊದಿಸಿ ಹೂವಿನ ಹಾರ ಹಾಕಿ ಗೌರವ ಸಲ್ಲಿಸಿ ಅಭಿನಂದಿಸಿದರು.

ನಮ್ಮೂರಿನ ಸಾಹಿತಿಗಳು ಕನ್ನಡ ವಿವಿ ಗೌರವಯುತ ನಾಡೋಜ ಪದವಿಗೆ ಆಯ್ಕೆಯಾಗಿರುವುದು ಸಂತಸ ತಂದಿದೆ. ಈಗಾಗಲೇ ಕೇಂದ್ರ ಸಾಹಿತ್ಯ ಪ್ರಶಸ್ತಿ, ರಾಜ್ಯ ಪ್ರಶಸ್ತಿ ಸೇರಿ ನಾನಾ ಪ್ರಶಸ್ತಿಗಳ ಪುರಸ್ಕೃತರಾದ ಕುಂವೀ ಅವರಿಗೆ ಗೌರವ ಸಂದಿರುವುದು ನಮ್ಮೂರಿನ ಹೆಮ್ಮೆಯಾಗಿದೆ ಎಂದು ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ ಹೇಳಿದರು.

ಕಸಾಪ ವತಿಯಿಂದ ಗೌರವಿಸಿದ ಅಧ್ಯಕ್ಷ, ಪದಾಧಿಕಾರಿಗಳೊಂದಿಗೆ ನಾಡೋಜ ಕುಂವೀ ಮಾತನಾಡಿದರು. ಕಸಾಪ ಪದಾಧಿಕಾರಿಗಳಾದ ಸೊನ್ನದ ರಾಜಣ್ಣ, ಎಂ.ಎಸ್.ಶಿವನಗುತ್ತಿ, ಈಶ್ವರ ತುರಕಾಣಿ, ಬಿ.ಎಂ. ಗಿರೀಶ, ಅಜ್ಜಪ್ಪ, ನಿರ್ಮಲ ಶಿವನಗುತ್ತಿ, ಸೋಮಶೇಖರ ಇದ್ದರು.

# ನಿರುದ್ಯೋಗ ಯುವಕ, ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024-25 ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ವಿವಿಧ ಕೌಶಲ್ಯಭಿವೃದ್ಧಿ (ತಾಂತ್ರಿಕ ನೈಪುಣ್ಯತೆ) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಹೆಚ್.ವಿ.ಮಂಜುನಾಥ ತಿಳಿಸಿದ್ದಾರೆ.

ಸರ್ಕಾರದಿಂದ ಅನುಮೋದನೆ ಪಡೆದ ಹಾಗೂ ಕೆಜಿಟಿಟಿಐ (ಕರ್ನಾಟಕ ಜರ್ಮನ್ ಟೆಕ್ನಿಕಲ್ ತರಬೇತಿ ಸಂಸ್ಥೆ) ತರಬೇತಿ ನೀಡಲು ಕಾರ್ಯಾದೇಶ ನೀಡಲಾಗಿದೆ. ತರಬೇತಿ ನೀಡಲಿರುವ ಕೋರ್ಸ್‌ಗಳು 1.ಸ್ವಯಂ ಉದ್ಯೋಗ ಟೈಲರಿಂಗ್ (2 ತಿಂಗಳು), 2.ಸಹಾಯಕ ಸೌಂದರ್ಯ ಚಿಕಿತ್ಸಕ (2 ತಿಂಗಳು), 3.ಡೇಟಾ ಎಂಟ್ರಿ ಆಪರೇಟರ್ (2 ತಿಂಗಳು) ಹಾಗೂ ಫ್ಯಾಷನ್ ಡಿಸೈನರ್ (1 ತಿಂಗಳು) ಅವಧಿಗೆ ತರಬೇತಿಗಳನ್ನು ನೀಡಲಾಗುತ್ತದೆ. ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ನಿರುದ್ಯೋಗಿ ಯುವಕ ಮತ್ತು ಯುವತಿರಲ್ಲಿ ಆಸಕ್ತ ಅರ್ಹ ಅಭ್ಯರ್ಥಿಗಳು ಏ.03 ರಿಂದ ವಿಜಯನಗರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕು ಮಟ್ಟದ ಕಚೇರಿಗಳಿಗೆ ಭೇಟಿ ನೀಡಿ ನಿಗಧಿತ ಅರ್ಜಿ ನಮೂನೆ ಪಡೆದು ಏ.15 ರೊಳಗಾಗಿ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಪಂ ವ್ಯಾಪ್ತಿಯಲ್ಲಿ ಗ್ರಾಮ ಒನ್ ಫ್ರಾಂಚೈಸಿಗಳ ನೇಮಕಕ್ಕೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಕೊಟ್ಟೂರು, ಹರಪನಹಳ್ಳಿ, ಹಡಗಲಿ ತಾಲೂಕಿನ ಗ್ರಾಪಂ ವ್ಯಾಪ್ತಿಯಲ್ಲಿ ಗ್ರಾಮ ಒನ್ ಕೇಂದ್ರಕ್ಕೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ತಿಳಿಸಿದ್ದಾರೆ.

ಜಿಲ್ಲೆಯ ಅಲಬೂರು ಗ್ರಾಪಂ, ಸಾಸ್ವಿಹಳ್ಳಿ ಗ್ರಾಪಂ, ಹಿರೇಮಲ್ಲನಕೇರಿ ಗ್ರಾಪಂ ವ್ಯಾಪ್ತಿಯಲ್ಲಿ ಗ್ರಾಮ ಒನ್ ಪ್ರಾಂಚೈಸಿಗಳನ್ನು ನೇಮಕ ಮಾಡಲು ಮೆ.ಬಿಎಲ್‌ಎಸ್ ಇಂಟರ್‌ನ್ಯಾಷನಲ್ ಸರ್ವೀಸಸ್ ಲಿಮಿಟೆಡ್ ಬೆಂಗಳೂರು ಇವರಿಗೆ ಏ.1 ರಿಂದ 15 ದಿನಗಳವರೆಗೆ ನಿಯಮಾನುಸಾರ ಅರ್ಜಿ ಅಹ್ವಾನಿಸಿದ್ದು, ಅಭ್ಯರ್ಥಿಗಳು https://kal-mys-gramone.karnataka.gov.in/index.php/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ವಿದ್ಯಾರ್ಥಿಗಳು, 2024-25 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ 'ಶುಲ್ಕ ಮರುಪಾವತಿ' ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಮೇ.31 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ಅರ್ಜಿ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಲು ಮನವಿ ಮಾಡಿಕೊಂಡಿದ್ದರು, ಮಾನ್ಯ ಹೈಕೋರ್ಟ್ ಮಧ್ಯಂತರ ಆದೇಶದಂತೆ ಎಲ್ಲಾ ಕೋರ್ಸ್‌ಗಳಿಗೆ ಮಾತ್ರ ಶುಲ್ಕ ಮರುಪಾವತಿಗೆ ಅವಧಿ ವಿಸ್ತರಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ https://ssp.postmatric.karnataka.gov.in ಹೆಚ್ಚಿನ ಮಾಹಿತಿಗಾಗಿ ಇಲಾಖೆ ವೆಬ್‌ಸೈಟ್ https://bcwd.karnataka.gov.in ಹಾಗೂ ಇಲಾಖೆ ಸಹಾಯವಾಣಿ ಸಂಖ್ಯೆ 8050770005, ಇಮೇಲ್: bcwdhelpline@gmail.com ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಕೆ.ಬಿ.ರಾಮಚಂದ್ರಪ್ಪರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.5 ರಂದು ಸ್ಕೌಟ್ಸ್, ಗೈಡ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣಾ ಸಮಾರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣಾ ಸಮಾರಂಭವನ್ನು ಏ.5 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಪಿ.ಮಂಜುನಾಥಪ್ಪ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್‌ರವರು ಪ್ರಮಾಣ ಪತ್ರಗಳನ್ನು ವಿತರಿಸಲಿದ್ದಾರೆ. ಸಮಾರಂಭವನ್ನು ಜಿಪಂ ಸಿಇಒ ನೊಂಗ್ಜಾಯ್ ಮೊಹಮದ್ ಅಕ್ರಮ್ ಅಲಿ ಷಾ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತರು, ಮಾಜಿ ಸಚಿವರಾದ ಪಿ.ಜಿ.ಆರ್.ಸಿಂಧ್ಯಾ ಆಗಮಿಸಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಹೊಸಪೇಟೆ ಪ್ರಭಾರ ಬಿಇಒ ಶೇಖರಪ್ಪ ಹೊರಪೇಟೆ, ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಚೇತನ್‌ರಾಜ್ ಎಸ್.ಸಾಲಿಯನ್ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 'ಶ್ರೇಷ್ಠ ಕೃಷಿಕ-ಸಮಗ್ರ ಕೃಷಿ ಪದ್ಧತಿ' ಪ್ರಶಸ್ತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಜಂಟಿ ಕಾರ್ಯದರ್ಶಿ, ಅಲುಮಿನಿ ಅಸೋಶಿಯೇಷನ್-ಕೃಷಿ ವಿಶ್ವ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಇವರು, ಕರ್ನಾಟಕ ರಾಜ್ಯದಲ್ಲಿ ಸುಸ್ಥಿರ ಕೃಷಿಯ ಬೆಳವಣಿಗಾಗಿ "ಸಮಗ್ರ ಕೃಷಿ ಪದ್ಧತಿ" ಯನ್ನು ಉತ್ತೇಜಿಸುವ ಸಲುವಾಗಿ 2024-25ನೇ ಸಾಲಿಗೆ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿ, ಮಲೆನಾಡು ಪ್ರದೇಶದ "ಸಮಗ್ರ ಕೃಷಿ ಪದ್ಧತಿ" ಅಳವಡಿಸಿಕೊಂಡಿರುವ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅವಧಿ ವಿಸ್ತರಿಸಲಾಗಿದೆ. ಅರ್ಹ ರೈತರು, ಅಲುಮಿನಿ ಅಸೋಶಿಯೇಷನ್-ಕೃಷಿ ವಿಶ್ವ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು ರವರು ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ, ಏಪ್ರಿಲ್ 9ರ ಒಳಗೆ 'ದಿ ಸೆಕ್ರೇಟರಿ, ಅಲುಮಿನಿ ಅಸೋಶಿಯೇಷನ್ ಯುಎಎಸ್ ಕನ್ವೆನ್ಷನ್ ಸೆಂಟರ್, ಹೆಬ್ಬಾಳ, ಬೆಂಗಳೂರು-560024' ಈ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ಪ್ರಶಸ್ತಿಯ ಮೊತ್ತವು ರೂ. 25000 ಗಳು ಇರುತ್ತದೆ. ಅರ್ಜಿ ನಮೂನೆಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಬಿಳಿಜೋಳ ಖರೀದಿಗೆ ಜೂ.30 ರವರೆಗೆ ಅವಧಿ ವಿಸ್ತರಣೆ: ಜಿಲ್ಲಾಧಿಕಾರಿ ನಿತೀಶ್ ಕೆ.

**ಹಂಪಿ ಟೈಮ್ಸ್ ರಾಯಚೂರು**



ಇಲ್ಲಿನ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2024–25ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಬಿಳಿ ಜೋಳ ಖರೀದಿಸುವ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರಾದ ಹಾಗೂ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಬಿಳಿಜೋಳವನ್ನು ಮಾರಾಟ ಮಾಡಲು ಮಾ.31 ರವರೆಗೆ ನೋಂದಣಿ ಮಾಡಿಕೊಂಡಿರುವ ಜಿಲ್ಲೆಯ ರೈತರಿಂದ ಖರೀದಿಸುವ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದ್ದು, ರೈತರು ತಮ್ಮ ಹತ್ತಿರದಲ್ಲಿರುವ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್‌ಎಕ್ಯೂ ಗುಣಮಟ್ಟದ ಮುಂಗಾರು ಬಿಳಿಜೋಳವನ್ನು ರೈತರು ಖರೀದಿ ಕೇಂದ್ರಗಳಿಗೆ ನೀಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಚಾನುಕೋಟಿ ಶ್ರೀಗಳ ಷಷ್ಠಿ ಸಂಭ್ರಮ

## ಜಗದ್ಗುರುಗಳ ಸಾನ್ನಿಧ್ಯದಲ್ಲಿ ಧಾರ್ಮಿಕ ಕಾರ್ಯಗಳು । ಧರ್ಮ ಧ್ವಜ ಹಸ್ತಾಂತರ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಡೋಣೂರು ಚಾನುಕೋಟಿ ಮಠಾಧ್ಯಕ್ಷ ಡಾ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಷಷ್ಠಿ ಪ್ರಯುಕ್ತ ನಾನಾ ಧಾರ್ಮಿಕ ಕಾರ್ಯಗಳನ್ನು ಗುರುವಾರ ನಡೆಸಲಾಯಿತು.

ಚಾನುಕೋಟಿ ಮಠದ ಸಭಾ ಭವನ ವೇದಿಕೆಯಲ್ಲಿ ಉಜ್ಜಯಿನಿ, ಶ್ರೀಶೈಲ, ಕಾಶೀ ಪೀಠದ ಉಭಯ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಬೆಳಗ್ಗೆ ನಾನಾ ವಿಧಾನಗಳನ್ನು ನಡೆಸಲಾಯಿತು. ಏ.3ಕ್ಕೆ 60 ವರ್ಷ ಪೂರೈಸಿದ ಚಾನುಕೋಟಿ ಶ್ರೀಗಳಿಗೆ ಬೆಳಗಿನ ಜಾವದಲ್ಲಿ ಗಂಗೋಧಕ ತೈಲ ಅಭ್ಯಂಜನ ಸ್ನಾನ ಮಾಡಿಸಲಾಯಿತು.

ನಂತರ ಜಗದ್ಗುರುಗಳು, ಶಿವಾಚಾರ್ಯರು, ಭಕ್ತರು ಶ್ರೀಗಳಿಗೆ ಹರಿದ್ರಾ ಲೇಪನ ಮಾಡಿದರು. ಜಗದ್ಗುರುಗಳು ಶ್ರೀಗಳ ಮಸ್ತಕದ ಮೇಲೆ ಪಾದವಿರಿಸಿ ಪೂಜೆ ನಡೆಸಿ ಪಟ್ಟ ಬಂಧನ ನೀಡಿದರು. ಶಿವಾಚಾರ್ಯರು ಕಾಶಿ ವಸ್ತ್ರ ಧರಿಸಿ, ಧರ್ಮ ಧ್ವಜವನ್ನು ಹಸ್ತಾಂತರ ಮಾಡಿದರು.

ಪಟ್ಟಾಧಿಕಾರ ಸಂದರ್ಭದಲ್ಲಿ ನಡೆಸುವ ಧಾರ್ಮಿಕ ಕಾರ್ಯಗಳನ್ನು ಷಷ್ಠಿ ಪ್ರಯುಕ್ತ ಮತ್ತೊಮ್ಮೆ ನಡೆಸಲಾಯಿತು. ಎಲ್ಲ ಕಾರ್ಯಗಳ ನಂತರ ಚಾನುಕೋಟಿ ಶ್ರೀಗಳು ಲಿಂಗಪೂಜೆ ಮಾಡಿಕೊಂಡು, ಜಗದ್ಗುರುಗಳ ಪಾದ ಪೂಜೆ ನಡೆಸಿ ಅವರಿಂದ ಕ್ರಿಯಾ ಪಡೆದು ಆಶೀರ್ವಾದ ಪಡೆದುಕೊಂಡರು

ಈ ಸಂದರ್ಭದಲ್ಲಿ ಯುಗಮಾನೋತ್ಸವದ ಸರ್ವಾಧ್ಯಕ್ಷ ಸಿಂಧಗಿ ಮಠದ ಶ್ರೀ ಪ್ರಭು ಸಾರಂಗದೇವ ಶಿವಾಚಾರ್ಯರು, ಬೆಂಗಳೂರಿನ ಶ್ರೀ ಡಾ. ಮಹಾಂತಲಿಂಗ ಶಿವಾಚಾರ್ಯರು, ಕೂಡ್ಲಿಗಿಯ ಶ್ರೀ ಪ್ರಶಾಂತ ಸಾಗರ ಶಿವಾಚಾರ್ಯರು, ಬೆಣ್ಣಿಹಳ್ಳಿಯ ಶ್ರೀ ಪಂಚಾಕ್ಷರಿ ಶಿವಾಚಾರ್ಯರು, ಜಾಲಹಳ್ಳಿ, ಸೊಲ್ಲಾಪುರ, ಯಡೆಯೂರು, ಹುಕ್ಕೇರಿ, ಶಿವಗಂಗಾ ಸೇರಿ ನೂರಕ್ಕೂ ಹೆಚ್ಚು ಶಿವಾಚಾರ್ಯರು, ಸಮಿತಿಯ ಕಾರ್ಯಾಧ್ಯಕ್ಷ ಎಂಎಂಜೆ ಹರ್ಷವರ್ಧನ, ಪದಾಧಿಕಾರಿಗಳಾದ ಚಾಪಿ ಚಂದ್ರಪ್ಪ, ಐ.ದಾರುಕೇಶ, ಡಾ.ವಿಜಯ ಕೆಂಭಾವಿಮಠ, ಎಂ.ವಿಶ್ವಾನಾಥ ಸೇರಿ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**04–04–2025 – ಶುಕ್ರವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 06:17:36 |
| ಸೂರ್ಯಾಸ್ತ | : 18:42:23 |
| ರಾಹು ಕಾಲ | : 10:57–12:30 |
| ಯಮಘಂಡ ಕಾಲ | : 15:36–17:09 |
| ಗುಳಿಕ ಕಾಲ | : 07:51–09:24 |



## ತುಂಗಭದ್ರಾ ನೀರಿನ ಮಟ್ಟ

**ಗುರುವಾರ : 03–04–2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.76 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9824 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.261 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.16 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 926 ಕ್ಯುಸೆಕ್ |
| ಸಾಮರ್ಥ್ಯ | 4.545 ಟಿಎಂಸಿ |

For Ads
Contact:
94486 33038

# ಶೇ.50 ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

**ಹಂಪಿ ಟೈಮ್ಸ್ ರಾಯಚೂರು**

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಎಲ್ಲಾ ಪ್ರಕಟಣೆಗಳನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಏಪ್ರಿಲ್ 30ರವರೆಗೆ ಶೇಕಡ 50ರ ರಿಯಾಯಿತಿಯ ದರದಲ್ಲಿ ಪುಸ್ತಕಗಳನ್ನು ಮಾರಾಟ ಲಭ್ಯವಿವೆ.

ಆನ್‌ಲೈನ್ ಮೂಲಕವೂ ಶೇ.50ರ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಓದುಗರು ವೆಬ್‌ಸೈಟ್ ವಿಳಾಸ: www. kuvempubhashabharathi. kamataka. gov.in ಭೇಟಿ ನೀಡ ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಪ್ರಾಧಿಕಾರದ ಪುಸ್ತಕ ಮಾರಾಟದ ಹಣವನ್ನು ಆಯಾ ತಿಂಗಳ ಕೊನೆಯ ದಿನಾಂಕದೊಳಗೆ ಪ್ರಾಧಿಕಾರದ ಉಳಿತಾಯ ಖಾತೆ ಸಂಖ್ಯೆ :8693101155619 ಹಾಗೂ ಐಎಫ್‌ಎಸ್‌ಸಿ ನಂಬರ್: ಸಿಎನ್‌ಆರ್‌ಬಿ0008693 ಖಾತೆಗೆ ಜಮೆ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ಕೆನರಾ ಬ್ಯಾಂಕ್ ವೆಲ್‌ಫೇರ್ ಸೆಂಟರ್ ಶಾಖೆ, ಬೆಂಗಳೂರು ಇವರನ್ನು ಸಂಪರ್ಕ ಮಾಡಬಹುದಾಗಿದೆ ಎಂದು ರಿಜಿಸ್ಟ್ರಾರ್ ತಿಳಿಸಿದ್ದಾರೆ.

# ಗಾಳಿ ಮಳೆಯ ಆರ್ಭಟಕ್ಕೆ ನೆಲ ಕಚ್ಚಿದ ಬಾಳೆ ಕಳಚಿದ ಗೋಪುರದ ಕಳಸ





**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಕೇಂದ್ರ ಸೇರಿದಂತೆ ಜಲ್ಲಾದ್ಯಂತ ಬುಧವಾರ ತಡರಾತ್ರಿ ಗುಡುಗು ಮಿಂಚು ಗಾಳಿ ಸಹಿತವಾಗಿ ಸುರಿದ ಭಾರೀ ಮಳೆಗೆ ರೈತರು ಬೆಳೆದಿದ್ದ ಬಾಳೆ ಬೆಳೆ ಸೇರಿದಂತೆ ವಿದ್ಯುತ್ ಕಂಬಗಳು ನೆಲಕಚ್ಚಿದ್ದು, ಹೊಸಪೇಟೆ ಶ್ರೀ ಮಾರ್ಕಂಡೇಶ್ವರ ದೇವಸ್ಥಾನ ಗೋಪುರದ ಕಳಸವೂ ಕಳಚಿ ಬಿದ್ದಿದೆ.

ಹೊಸಪೇಟೆ, ಮರಿಯಮ್ಮನಹಳ್ಳಿ ಹಾಗೂ ಕಮಲಾಪುರ ಹೋಬಳಿಯಲ್ಲಿ ಎರಡು ಗಂಟೆಗೂ ಅಧಿಕ ಗಾಳಿ, ಗುಡಗು ಸಹಿತ ಧಾರಾಕಾರ ಮಳೆ ಸುರಿಯಿತು. ಕೆಲದಿನಗಳಿಂದ ಬಿಸಿಲ ತಾಪಮಾನಕ್ಕೆ ಜನ ಜಾನುವಾರುಗಳು ತತ್ತರಿಸಿದ್ದರು. ಬೆಳಿಗ್ಗೆಯಿಂದಲೂ ಗಾಳಿ ಜತೆಗೆ ಬಿಸಿ ಗಾಳಿ ಬೀಸುವ ಜತೆಗೆ ಮಳೆ ಮುನ್ಸೂಚನೆ ನೀಡಿತ್ತು. ಅದರಂತೆ ಬುಧವಾರ ರಾತ್ರಿ ಮಳೆರಾಯ ಕೃಪೆ ತೋರಿದ್ದು, ಜಿಲ್ಲೆಯಲ್ಲಿ 11.1 ಮಿಮೀ ಮಳೆಯಾಗಿದೆ.

ತುಂಗಭದ್ರಾ ಜಲಾನಯನ ಹಿಂಭಾಗದ ರೈತರು ಬೆಳೆದ ಬೆಳೆಗೆ ಬಿಸಿಲಿಗೆ ಬಾಡುವ ಹಂತಕ್ಕೆ ತಲುಪಿದ್ದು ಈ ಸಂದರ್ಭದಲ್ಲಿ ಮಳೆಯ ಸಿಂಚನವು ಜನರಲ್ಲಿ ಹರ್ಷ ತಂದಿತು. ಮಳೆ ಇಲ್ಲದೆ ರೈತರು ಕಂಗಾಲಾಗಿದ್ದರು. ಮಳೆಗಾಗಿ ಕೆಲವೆಡೆ ರೈತರು ವಿಶೇಷ ಪೂಜೆ ಸಹ ನಡೆಸಿದ್ದರು. ವಾಡಿಕೆಯಂತೆ ಯುಗಾದಿ ಹಬ್ಬದಂದು ಪ್ರತಿ ವರ್ಷ ಮುಂಗಾರು ಪೂರ್ವ ಮಳೆ ಬೀಳುತ್ತಿತ್ತು. ಈ ಬಾರಿ ಕೂಡ ವಾಡಿಕೆಯಂತೆ ಮಳೆಯಾಗಿದೆ. ವರುಣನ ಕೃಪೆಗೆ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ರಸ್ತೆಯ ತಗ್ಗು ಮತ್ತು ಗುಂಡಿಗಳಲ್ಲಿ ನೀರಿನಿಂದ ಕೆಲವೊತ್ತು ತುಂಬಿದ್ದವು. ಮಳೆಯ ಅರ್ಭಟಕ್ಕೆ ವಿದ್ಯುತ್ ವ್ಯತ್ಯಯಗೊಂಡಿದ್ದು, ಅಲ್ಲಲ್ಲಿ ವಿದ್ಯುತ್ ವೈರ್‌ಗಳು ತುಂಡಾಗಿರುವುದನ್ನು ಕೆಇಬಿ ಸಿಬ್ಬಂದಿ ಸರಿಪಡಿಸಲು ಹರಸಾಹಸಪಟ್ಟರು.

ಹೊಸಪೇಟೆಯಲ್ಲಿ 8.1 ಮಿಮೀ ಮಳೆಯಾಗಿದೆ. ಹಗರಿಬೊಮ್ಮನಹಳ್ಳಿ 14.6 ಮಿಮೀ, ಹೂವಿನಹಡಗಲಿ 7.8 ಮಿಮೀ, ಹರಪನಹಳ್ಳಿ 9.7 ಮಿಮೀ, ಕೊಟ್ಟೂರು 12.8 ಮಿಮೀ, ಕುಡ್ಲಿಗಿ 15.7 ಮಿಮೀ, ಒಟ್ಟು ಜಿಲ್ಲೆಯಲ್ಲಿ 11.1 ಮಿಮೀ ಮಳೆಯಾಗಿದೆ ಎಂದು ವರದಿಯಾಗಿದೆ.



# ತೊಗರಿ ಖರೀದಿಸಲು ಮೇ.1 ರವರೆಗೆ ಅವಧಿ ವಿಸ್ತರಣೆ

**ಮೂರನೇ ಪುಟದಿಂದ**

ಪ್ರತೀ ರೈತರಿಂದ ಗರಿಷ್ಠ 40 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಸಲಾಗುತ್ತಿದೆ. ತೊಗರಿಯನ್ನು ಖರೀದಿ ಸಲು ನಾಫೆಡ್ ಹಾಗೂ ಎನ್.ಸಿ.ಸಿ.ಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಯನ್ನಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ, ನಿಯಮಿತ ಬೆಂಗಳೂರು ಸಂಸ್ಥೆಯನ್ನು ರಾಜ್ಯದ ವತಿಯಿಂದ ಖರೀದಿ ಸಂಸ್ಥೆಯನ್ನಾಗಿ ಗುರುತಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 65 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಕೃಷ್ಣ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಂ 1
ಜಿಲ್ಲಾಮಟ್ಟದ ದಿನಪತ್ರಿಕೆ
Expand your brand's reach
Wider with Hampi Times!
Why Advertise with Us?
Widespread Reach – Thousands of dedicated readers across the region.
Targeted Local Audience – Connect with local customers and tourists.
Affordable & Effective – Cost-effective ad packages with maximum visibility.
Print + Digital Impact – Reach Readers through both newspaper and online platforms.
Trusted Reputation – A credible news source with a strong community presence.
About Hampi Times
Hampi Times is a leading local Daily newspaper dedicated to delivering accurate and insightful news. With a strong readership across the region, we offer a powerful platform for businesses to reach their target Readers effectively!
We offer Flexible advertising plans to suit your business needs Quarter/half/FullPage Ad
Call Us for more info :M: 9448633038
www.hampitimes.com/epaper.hampitimes.com